ಅಧ್ಯಕ್ಷರು.—ಪ್ರಸ್ತಾವ ಏನೆಂದರೆ:—

ಮೊದಲನೆಯ ಖಂಡ, ಹೆಸರು ಮತ್ತು ಅವತರಣಿಕೆಗಳು ವಿಧೇಯಕದ ಭಾಗವಾಗಿರುತ್ತವೆ.

ಪ್ರಸ್ತಾಪವನ್ನು ಅಂಗೀಕರಿಸಲಾಯಿತು

(ಮೊದಲನೆ ಖಂಡ, ಹೆಸರು ಮತ್ತು ಅವತರಣಿಕೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಬದಲಿ ಮೂತ್ರ ಪಿಂಡಗಳ ಜೋಡಣೆಯ ಕರ್ನಾಟಕ ವಿಧೇಯಕ ೧೯೬೬ನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ.—

"ಬದಲಿ ಮೂತ್ರ ಪಿಂಡಗಳ ಜೋಡಣೆಯ ಕರ್ನಾಟಕ ವಿಧೇಯಕ ೧೯೬೬ರನ್ನು ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

೧೯೬೬ರ ಕರ್ನಾಟಕ ಲೋಕಾಯುಕ್ತ (ಎರಡನೆಯ ತಿದ್ದುಪಡಿ) ಮಸೂದೆ.

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ಹಾಗೂ ಆಹಾರ ಮತ್ತು ನಾಗರೀ ಸರಬರಾಜು ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ೧೯೬೬ರ ಕರ್ನಾಟಕ ಲೋಕಾಯುಕ್ತರ ಎರಡನೆಕ ತಿದ್ದುಪಡಿಯ ಮಸೂದೆಯನ್ನು ಪರ್ಯಾಲೋಚಿಸಬೇಕೆಂದು ಸೂಚಿಸುತ್ತೇನೆ.

ಅಧ್ಯಕ್ಷರು.—ಮಂಡಿಸಲಾಯಿತು.

ಶ್ರೀ ಎಂ. ಎಸ್. ಕೃಷ್ಣನ್.—ಕನ್ನಡದಲ್ಲಿ ಕೊಟ್ಟಿದ್ದಾರೆ. ಕನ್ನಡದಲ್ಲಿ ಓದಿದರೂ ಸಹಾ ಇದು ಬಹಳ ಕಠಿಣವಾಗಿದೆ. "ಕಬ್ಬಿಣದ ಕಡಲೆ ಇದ್ದ ಹಾಗೆ" ಇದೆ. ಇಂಗ್ಲೀಷ್‌ನಲ್ಲಿ ಮಾಡಿ ಕೊಡ ಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಮೂಲ ಮಸೂದೆಗಳನ್ನು ಕನ್ನಡದಲ್ಲೇ ಮಾಡಿದ್ದೇವೆ. ತಿದ್ದು ಪಡಿಯನ್ನೂ ಕನ್ನಡದಲ್ಲೇ ಮಾಡಿದ್ದೇವೆ.

ಅಧ್ಯಕ್ಷರು.—ಮಾನ್ಯ ಕೃಷ್ಣನ್ ಅವರೇ. ಅದು ಅಚ್ಚ ಕನ್ನಡದಲ್ಲಿಯೇ ಇದೆ.

ಶ್ರೀ ಎಂ. ಎಸ್. ಕೃಷ್ಣನ್.—ಅವರಷ್ಟು ಕನ್ನಡ ಪಂಡಿತ ನಾನಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೇ, ಸಾಮಾನ್ಯವಾದ ತಿದ್ದುಪಡಿಗಳನ್ನು ಆಡಳಿತಾತ್ಮಕ ದೃಷ್ಟಿಯಿಂದ ಮಾಡುವುದಕ್ಕೆ ಮುಖ್ಯವಾದಂಥ ಅಂಶಗಳನ್ನು ಮಾತ್ರ ಸಭೆಯ ಗಮನಕ್ಕೆ ತರುವುದಕ್ಕೆ ತಮ್ಮ ಅನುಮತಿಯನ್ನು ಕೋರುತ್ತೇನೆ. ಸೆಕ್ಷನ್ ೭ರ ಕ್ಲಾಸ್ ೩ರಲ್ಲಿ ಎರಡು ಮೂರು ತಿದ್ದುಪಡಿಗಳನ್ನು ಮಾಡಿದ್ದಾರೆ. ಲೋಕಾಯುಕ್ತ ಮತ್ತು ಉಪ ಲೋಕಾಯುಕ್ತರು ಪಬ್ಲಿಕ್ ಸರ್ವೆಂಟ್ಸ್ ಬಗ್ಗೆ ಕಂಪ್ಲೇಂಟ್ ಇದ್ದಾಗ ಇಂಥ ವಿಷಯದ ಬಗ್ಗೆ ಸರ್ಕಾರದವರು ಇದನ್ನು ಪರಿಶೀಲನೆ ಮಾಡಬೇಕು ಎಂದು ಕೇಳಿದಾಗ ಅಂಥದ್ದನ್ನು ಕೂಡಾ ಲೋಕಾಯುಕ್ತರು ಮತ್ತು ಉಪಲೋಕಾಯುಕ್ತರು ಪರಿಶೀಲನೆ ಮಾಡಬಹುದು ಒಂದು. ಎರಡನೆಯದು, ಲೋಕಾಯುಕ್ತರು ಮತ್ತು ಉಪಲೋಕಾಯುಕ್ತರಿಗೆ ಆಡಳಿತಾತ್ಮಕ ವಿಷಯದಲ್ಲಿ ಕೆಲಸವನ್ನು ಹಂಚಿಕೊಳ್ಳುವ ವಿಚಾರದಲ್ಲಿ ಅವರಿಬ್ಬರಿಗೂ ಇರತಕ್ಕಂಥದ್ದರ ಬಗ್ಗೆ ಕೆಲವು ಸಾಮಾನ್ಯವಾದ ತಿದ್ದುಪಡಿಗಳು ಇವೆ. ಆಮೇಲೆ ಲೋಕಾಯುಕ್ತರು ರಜಾದಲ್ಲಿದ್ದಾಗ ಯಾರು ಕೆಲಸ ಮಾಡಬೇಕು ಎನ್ನುವುದರ ಬಗ್ಗೆ ಸ್ಪಷ್ಟವಾಗಿಲ್ಲ. ಅದಕ್ಕೆ ತಿದ್ದುಪಡಿಯನ್ನು ಇದರಲ್ಲಿ ತಂದಿದ್ದೇವೆ.

ಸೆಕ್ಷನ್ ೯ ರಲ್ಲಿ, Action of the public servant which is under investigation not to be invalidated and the power of any other public servant to take further action not affected. Eg, There is an allegation about a public servant, some action is taken against him, it does not affect the action taken by him afterwards so far as that person. If any other person discharges his function his action will not be affected. ಸೆಕ್ಷನ್ ೧೦, ತನಿಖೆಗೆ ಹೋದ ಸಮಯದಲ್ಲಿ ಮನೆ ಹಾಗೂ ಆಸ್ತಿಪಾಸ್ತಿ ತನಿಖೆ ಮಾಡುತ್ತಾರೆ. ಆದರೆ ಆಗ ಕೆಲವರು ಮೈಮೇಲೆ ಆಭರಣಗಳನ್ನು ಹಾಕಿಕೊಂಡು ಹಣವನ್ನು ಬಚ್ಚಿಟ್ಟುಕೊಳ್ಳಲಿಕ್ಕೆ ಸನ್ನಿವೇಶ ಇದೆ. ಅಂತಹ ಸಮಯದಲ್ಲಿ ಅನುಮಾನ ಬಂದಾಗ ಮನುಷ್ಯರನ್ನೂ ಕೂಡಾ ತನಿಖೆ ಮಾಡಬೇಕೆಂದು ಇದರಲ್ಲಿ ಒಂದು ಪ್ರಸ್ತಾವನೆ. ಅವರದು ಆನ್ಯುಯಲ್ ರಿಪೋರ್ಟ್ ಕೊಡಬೇಕೆಂದು ಇದೆ. ಅದರಲ್ಲಿ ಯಾರು ಕೊಡಬೇಕು ಎಂದು ಸರಿಯಾಗಿ ಸ್ಪಷ್ಟವಾಗಿಲ್ಲ. ಅದಕ್ಕೋಸ್ಕರವಾಗಿ ಒಬ್ಬರು ವಾರ್ಷಿಕ ವರದಿ ಕೊಡಬೇಕು. 'Each of them should give aunual reports' ಎಂದು ಮಾಡಿದ್ದೇವೆ. ಆಮೇಲೆ ಇನ್ನೊಂದು ಮುಖವಾದುದು ಎಂದರೆ ಈಗ ಮುಖ್ಯಮಂತ್ರಿಗಳ ಮೇಲೆ.....ಮುಖ್ಯಮಂತ್ರಿಗಳು ಗೌರ್ನರಿಗೆ where the competent authority is other than the Governor, Government or the Chief Minister, the power to accept or reject the declaration made by the Lokayukta or Upalokaukta that the public servant should not continue in the post held by him is given to to the Government. ಇದಕ್ಕೆ ನಾನು ಸ್ವಲ್ಪ ವಿವರಣೆಯನ್ನು ಕೊಡುತ್ತೇನೆ. ಮಾನ್ಯ ಮುಖ್ಯಮಂತ್ರಿಯವರು, ರಾಜ್ಯಪಾಲರು ಮತ್ತು ಸರ್ಕಾರ, ಲೋಕಾಯುಕ್ತ ಮತ್ತು ಉಪಲೋಕಾಯುಕ್ತ ಕೊಡತಕ್ಕ ವರದಿಗಳನ್ನು ಒಪ್ಪಿಕೊಳ್ಳುವುದಕ್ಕೆ ಅಥವಾ ತಳ್ಳಿಹಾಕುವುದಕ್ಕೆ ಅಧಿಕಾರ ಇದೆ, ಹಳೆಯದರಲ್ಲಿ ಈ ರೀತಿ ಇದೆ. ಆದರೆ ಬಂದಿರುವ ಪ್ರಶ್ನೆ ಏನೆಂದರೆ, ಈ ಕಾನೂನು ಪ್ರಕಾರ ಮುಖ್ಯಮಂತ್ರಿಗಳು, ರಾಜ್ಯಪಾಲರು ಮತ್ತು ಸರ್ಕಾರ ಅಲ್ಲದೇ ಬೇರೆ ಸ್ಪಾಟ್ಚುಟರಿ ಬೋಡ್ರ್ಸ್‌ನಲ್ಲಿ ಇರತಕ್ಕ ಕೆಲಸಗಾರರ ಬಗ್ಗೆ ತನಿಖೆ ನಡೆಸಿ ವರದಿ ಬಂದಾಗ ಈಗಿರತಕ್ಕ ಕಾನೂನು ಪ್ರಕಾರ ಅಲ್ಲಿರತಕ್ಕ ಮುಖ್ಯಸ್ಥರು ತೀರ್ಮಾನ ತೆಗೆದುಕೊಳ್ಳಬಹುದು. ವರದಿ ಮೇಲೆ ತೀರ್ಮಾನ ತಳ್ಳಿಹಾಕಬಹುದು. ಆದು ತೊಂದರೆಯಾಗುತ್ತಿದೆ. ಮುನಿಸಿಪಾಲಿಟಿಯಲ್ಲಿ ಇರತಕ್ಕವರ ಮೇಲೆ ತನಿಖೆ ಮಾಡಬೇಕೆಂದು ಇದೆ. ಲೋಕಾಯುಕ್ತದ ಹಿರಿಯ ಅಧಿಕಾರಿಗಳು ಮಾಡಿರತಕ್ಕ ತೀರ್ಮಾನದ ಮೇಲೆ ನಿರ್ಣಯ ತೆಗೆದುಕೊಳ್ಳುವುದಕ್ಕೆ ಕಮಿಷನರ್ ಆಗಲೀ ಅಥವಾ ಛೀಫ್ ಆಫೀಸರ್‌ಗಾಗಲೀ ಇರಬಾರದು ಎಂದು ಅಂತಹ ಸಮಯದಲ್ಲಿ ತಮ್ಮ ತಿಳುವಳಿಕೆಯನ್ನು ಕಳುಹಿಸತಕ್ಕದ್ದು. ಈ ವಿಷಯದಲ್ಲಿ ಸರ್ಕಾರ ಕೊನೆಯ ತೀರ್ಮಾನವನ್ನು ತೆಗೆದುಕೊಳ್ಳುವುದು. ಈ ಒಂದು ಅವಕಾಶವನ್ನು ಮಾಡಿಕೊಟ್ಟಿದ್ದೇವೆ. ಇನ್ನು ೧೪ನೆಯ ಸೆಕ್ಷನ್‌ನಲ್ಲಿ ವ್ಯಾಕರಣಕ್ಕೆ ಸಂಬಂಧಪಟ್ಟದ್ದುದು ಇದೆ. ಇನ್ನು ೧೫ರಲ್ಲಿ ಲೋಕಾಯುಕ್ತರಿಗೆ ಸ್ಟಾಫ್ ಮೇಲೆ ಯಾವ ರೀತಿ ಕಂಟ್ರೋಲ್ ಇರಬೇಕು, ಶಿಸ್ತು ಇರಬೇಕು ಎನ್ನುವ ಬಗ್ಗೆ ವಿವರಣೆ ಇದೆ. ಆಮೇಲೆ enquiries in proceedings transferred under Section 26(3) included in the Additional functions that may be confired on Upalokayukta. ಏನೆಂದರೆ, ವಿಜಿಲೆನ್ಸ್ ಕಮಿಷನರ್ ಮುಂದೆ ಇದ್ದ ಎಲ್ಲಾ ಕಡತಗಳನ್ನು ಉಪಲೋಕಾಯುಕ್ತರಿಗೆ ಕೊಡಬೇಕೆಂದು ಕಾನೂನು ಮಾಡಿದ್ದೇವೆ. ಆದರಲ್ಲಿ ಸ್ಪಷ್ಟನೆ ಇಲ್ಲದೇ ಇರುವುದರಿಂದ ಈ ತಿದ್ದುಪಡಿಯನ್ನು ತಂದಿದ್ದೇವೆ. ಆಮೇಲೆ Permission of Lokayukta or Upalokayukta necessary to take connizance of offence under sub-sectioe (1). ತಪ್ಪಾಗಿ ಇದರಲ್ಲಿ ಒಂದು ವಿವರಣೆ ಕೊಡಬೇಕು. ಈಗ ನಾನು ಒಂದು ಅರ್ಜಿಯನ್ನು ಹಾಕುತ್ತೇನೆ. ನನ್ನ ಅರ್ಜಿ ಸುಳ್ಳು ಅಥವಾ ಹುರುಳು ಇಲ್ಲದ್ದು ಎಂದು ತೀರ್ಮಾನ ಆಯಿತು ಎಂದು ಇಟ್ಟುಕೊಳ್ಳೋಣ. ಉದಾಹರಣೆಗೆ ಕೃಷ್ಣನ್ ಅವರ ಮೇಲೆ ಆಪಾದನೆ ಮಾಡಿದ್ದು ಅದು ನಿರಾಧಾರವಾದುದು ಎಂದು ಗೊತ್ತಾಗುತ್ತದೆ. ಆಗ ನಾನು ಅವರನ್ನು ವಿನಾಕಾರಣ ಅವಮಾನ ಮಾಡಿದೆ ಎನಿಸುತ್ತದೆ. ಅಂತಹ ಸಮಯದಲ್ಲಿ ಕಂಪ್ಲೇಂಟ್ ಹಾಕಬಹುದು. ಆ ರೀತಿ ಕಂಪ್ಲೇಂಟ್ ಹಾಕುವಾಗ ತಾವು ಪೂರ್ವಭಾಯಿಯಾಗಿ ಪರ್ಮಿಷನ್ ಅನ್ನು ಲೋಕಾಯುಕ್ತ ಮತ್ತು ಉಪಲೋಕಾ

ಯುಕ್ತರಿಂದ ಪಡೆಯಬೇಕು. For prosecution of any person for making false complaint. ಇದನ್ನು ತಾತ್ಪರ್ಯವಾಗಿ, ಕಾನೂನು ದೃಷ್ಟಿಯಿಂದ ಮಾಡಿದ್ದೇವೆ. ಇವುಗಳು ಮುಖ್ಯ ವಿಚಾರ. ಮಾನ್ಯ ಸದಸ್ಯರು ಇದಕ್ಕೆ ತಪ್ಪು ಬೆಂಬಲವನ್ನು ಕೊಡಬೇಕೆಂದು ಈ ಮೂಲಕ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಅಧ್ಯಕ್ಷರೇ, ನಾನು ಮೊದಲೇ ಹೇಳಿದಹಾಗೆ ಇದನ್ನು ಇಂಗ್ಲೀಷ್‌ನಲ್ಲಿ ಮಾಡಿಕೊಡಬೇಕು. ಇದಕ್ಕೆ ತಾವೂ ಕೂಡಾ ಸಹಕಾರ ಕೊಡಬೇಕು. ನಿಮ್ಮ ರೂಲ್ಸ್ ಆಫ್ ಪ್ರೊಸೀಜರ್‌ನಲ್ಲಿ ೮೨ನೇ ನಿಯಮದಲ್ಲಿ ಬಿಲ್ ಬಗ್ಗೆ ಏನು ಹೇಳುತ್ತೀರಿ ? ''After a bill has been introduced or in the case of a Bill published under rule 73 after such Bill has been published, the Bill and the Statement of objects and reasons shall be translated into Kannada and such translations shall be published in the Gazettee'' ಎಂದು ಇದೆ. ೭೩ ರಿಂದ ೭೪ನ್ನು ನಾನು ಓದುವುದಕ್ಕೆ ಹೋಗುವುದಿಲ್ಲ. ಬಿಲ್‌ನ್ನು ಗೆಜೆಟ್‌ನಲ್ಲಿ ಪಬ್ಲಿಷ್ ಮಾಡಬೇಕೆಂದು ಇದೆ. ಆದರೆ ಯಾವ ಭಾಷೆಯಲ್ಲಿ ಪ್ರಕಟಣೆ ಮಾಡಬೇಕೆಂದು ಹೇಳಿಲ್ಲ. ಕನ್ನಡವೂ ಆಗಬಹುದು, ಇಂಗ್ಲೀಷ್ ಕೂಡಾ ಆಗಬಹುದು.

ಶ್ರೀ ಎ. ಲಕ್ಷ್ಮೀಸಾಗರ್,—ಇದು ಆರ್ಡಿನೆನ್ಸ್ ರೀಪ್ಲೇಸಿಂಗ್ ಬಿಲ್ ಇದೆ.

ಶ್ರೀ ಎಂ. ಎಸ್. ಕೃಷ್ಣನ್.—ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ಕೆಲವು ಅಮೆಂಡ್‌ಮೆಂಟ್ ತಂದಿರುವುದನ್ನು ಹೇಳುವುದಕ್ಕೆ ಕಷ್ಟವಾಗಿದೆ. ನೀವು ಮಾತಿನಲ್ಲಿ ಹೇಳಿದ್ದಕ್ಕೂ ಇಲ್ಲಿ ಇರುವ ಪದಗಳಿಗೂ ಬಹಳ ವ್ಯತ್ಯಾಸ ಕಂಡುಬರುತ್ತಿದೆ.

ಶ್ರೀ ಎ. ಲಕ್ಷ್ಮೀಸಾಗರ್.—ಸುಲಭವಾದ ಕನ್ನಡದಲ್ಲಿ ಹೇಳಿರುವುದರಿಂದ ಹಾಗೆನಿಸುತ್ತಿದೆ. ನನಗೂ ಕೂಡಾ ಬಳಸಿರುವ ಕನ್ನಡವನ್ನು ಅರ್ಥ ಮಾಡಿಕೊಳ್ಳುವುದು ಕಷ್ಟವಾಗುತ್ತದೆ. ಕಾರಣ ಇಷ್ಟೇ, ರಾಜ್ಯ ಭಾಷೆಗಳಲ್ಲಿ ಕಾನೂನು ಮಾಡತಕ್ಕ ಸಮಯದಲ್ಲಿ ಕೆಲವು ಮೂಲ ಶಬ್ದಗಳನ್ನು ಬಳಕೆ ಮಾಡಬೇಕಾಗುತ್ತದೆ. ಅಂತಹ ಶಬ್ದಗಳಿಗೆ ಅರ್ಥ ಹೀಗೇ ಇರಬೇಕೆಂದು glossaryನ್ನು ಕೇಂದ್ರ ಸರ್ಕಾರದವರು ತಯಾರು ಮಾಡಿ ಕಳುಹಿಸಿದ್ದಾರೆ. ಈಗ 'competent authority and bracket, these words ಅನ್ನು ಕನ್ನಡದಲ್ಲಿ ಮಾಡಿ ಕೊಟ್ಟಿದ್ದಾರೆ. ಅದೇ ಶಬ್ದವನ್ನು ಉಪಯೋಗಿಸಬೇಕೇ ಹೊರತು ಒಂದೊಂದು ಸಮಯದಲ್ಲಿ ಒಂದೊಂದು ರೀತಿ ಮಾಡಿದರೆ ಕೋರ್ಟ್‌ನಲ್ಲಿ ಇಂಟರ್‌ಪ್ರಿಟ್ ಮಾಡುವುದಕ್ಕೆ ಕಷ್ಟವಾಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—Glossery ಇರುವುದಕ್ಕೆ ನಾನು ಒಪ್ಪುತ್ತೇನೆ. ಆದರೆ ನಮ್ಮ ಶಾಸನಸಭಾಧ್ಯಕ್ಷರಿಗೇ ಈ Glossery ಎಂದರೆ ಚೆನ್ನಾಗಿ ಗೊತ್ತಿಲ್ಲ. ಪದಗಳ ತಾತ್ಪರ್ಯ ಏನೆಂದು ಗೊತ್ತಿಲ್ಲ. ತಾವು ನಮಗೆ ಇಂಗ್ಲೀಷ್ ಕಾಪಿ ಕೊಡುವ ವ್ಯವಸ್ಥೆಯನ್ನು ಮಾಡಬೇಕು. ನಾವು ಕನ್ನಡದಲ್ಲೇ ಮಾತನಾಡುತ್ತೇವೆ ಎಂದು ಹೇಳಬಹುದು. ಮತ್ತೆ ನನಗನ್ನಿಸುತ್ತದೆ. ಲೆಜಿಸ್ಲೇಷನ್ ಬಗ್ಗೆ ಚಾಪ್ಟರ್ ೧೧ರಲ್ಲಿ ಏನಿದೆ ? ಎಲ್ಲಾ ಇಂಗ್ಲೀಷ್‌ನಲ್ಲಿ ಮಾಡಬೇಕು, ಕನ್ನಡದಲ್ಲಿ ಟ್ರಾನ್ಸ್‌ಲೇಟ್ ಮಾಡಬೇಕೆನ್ನುವ ಅಭಿಪ್ರಾಯ ಇದೆ. ಇದೊಂದರಲ್ಲಿ ಮಾತ್ರ ತಾವು ನಮ್ಮ ನೆರವಿಗೆ ಬರಬೇಕು. ಕನ್ನಡಿಗರೇ ಏನು ಅಚ್ಚ ಕನ್ನಡಿಗರೂ ಕೂಡಾ ಇದನ್ನು ಓದುವುದಕ್ಕೆ ಕಷ್ಟವಾಗುತ್ತದೆ. ಇದರ ತಿರುಳಿನ ಬಗ್ಗೆ ಒಂದೇ ಒಂದು ಮಾತನ್ನು ಒಂದು ವಿಷಯದಲ್ಲಿ ಮಾತ್ರ ಹೇಳುತ್ತೇನೆ. ಇದರಲ್ಲಿ ''ಕರ್ನಾಟಕ ವಿಧಾನಸಭೆಯಲ್ಲಿ ಕಾರ್ಯವಿಧಾನ ಮತ್ತು ಕಾರ್ಯಕಲಾಪಗಳ ನಿಯಮಗಳು, ೭೧ನೇ ನಿಯಮದಂತೆ ಅಗತ್ಯಪಡಿಸಿದ ವಿವರಣಾತ್ಮಕ ಹೇಳಿಕೆ'' ಇದೆ. ಈ ಹೇಳಿಕೆಯಲ್ಲಿ ಏನು ಹೇಳಿದ್ದಾರೆಂದರೆ, ''ಕರ್ನಾಟಕ ಲೋಕಾಯುಕ್ತ ಅಧಿನಿಯಮ, ೧೯೮೪ (ಕರ್ನಾಟಕ ಅಧಿನಿಯಮ ೧೯೮೫ರ ಸಂಖ್ಯೆ ೪)ನ್ನು ಈ ಕೆಳಕಂಡ ಉದ್ದೇಶಗಳಿಗಾಗಿ ತಿದ್ದುಪಡಿ ಮಾಡಲು ಉದ್ದೇಶಿಸಲಾಗಿದೆ:—'' ಇದರಲ್ಲಿ ಮೊದಲನೆಯದಕ್ಕೆ ಏನೂ ಭಿನ್ನಾಭಿಪ್ರಾಯ ಇಲ್ಲ. ತನಿಖೆ ಮಾಡುವುದಕ್ಕೆ ಅವಕಾಶ ಕೊಡಬೇಕು. ರಾಜ್ಯ ಸರ್ಕಾರ ಕಳುಹಿಸುವುದಕ್ಕೆ ತನಿಖೆ ಮಾಡುವುದು ಅವಕಾಶ ಇರಬೇಕೆಂದು ನನಗನ್ನಿಸುತ್ತದೆ. ಇಲ್ಲಿ (ಅ)ನಲ್ಲಿ ಈ ರೀತಿ ಇದೆ. ''ಲೋಕಾಯುಕ್ತರಿಗೆ ಅಥವಾ ಉಪಲೋಕಾಯುಕ್ತರಿಗೆ ಮೊಕದ್ದಮೆಗಳನ್ನು ತನಿಖೆ ಮಾಡಲು ಕಳುಹಿಸುವ ಅಧಿಕಾರವನ್ನು ರಾಜ್ಯ ಸರ್ಕಾರಕ್ಕೆ ನೀಡುವುದು (ಮೂಸೂದೆಯ ಕಲಂ ೩(೨) (ಎ),'' ಎಂದಿದೆ. ಈಗ ನೀವು ೩(೨ಎ)ನ್ನು ನೋಡಿ.

''ಉಪ–ಪ್ರಕರಣ (೧) ಮತ್ತು (೨)ರಲ್ಲಿ ಏನೇ ಒಳಗೊಂಡಿದ್ದರೂ, ಸಾರ್ವಜನಿಕ ನೌಕರನು ಕೈಗೊಂಡ ಅಥವಾ ಅವನ ಸಾಮಾನ್ಯ ಅಥವಾ ವಿಶೇಷ ಆನುಮೋದನೆಯೊಂದಿಗೆ ಕೈಗೊಳ್ಳಲಾದ ಯಾವುದೇ ಕ್ರಮವನ್ನು ರಾಜ್ಯ ಸರ್ಕಾರವು ತನಿಖೆಗಾಗಿ ಕಳುಹಿಸಿದರೆ ಲೋಕಾಯುಕ್ತ ಅಥವಾ ಉಪಲೋಕಾಯುಕ್ತನು ತನಿಖೆ ಮಾಡಬಹುದು.''

ಎಂದರೆ ರಾಜ್ಯ ಸರ್ಕಾರ ತನಿಖೆಗೆ ಕಳುಹಿಸಿದರೆ ಲೋಕಾಯುಕ್ತ ಮತ್ತು ಉಪಲೋಕಾಯುಕ್ತ ತನಿಖೆ ಮಾಡುವುದು. ಅದು ಕರೆಕ್ಟ್ ನಿಮ್ಮ ಬಿಲ್‌ನಲ್ಲಿರುವುದು. ಆದರೆ ನಮ್ಮ ಮನಸ್ಸಿನಲ್ಲಿರುವುದನ್ನು ಹೇಳಿ ಮುಗಿಸುತ್ತೇನೆ. ಆದರೆ ಬರೆದಿರುವುದು ಇದರಲ್ಲಿ ''ಲೋಕಾಯುಕ್ತರಿಗೆ ಅಥವಾ ಉಪಲೋಕಾಯುಕ್ತರಿಗೆ ಮೊಕದ್ದಮೆಗಳನ್ನು ತನಿಖೆ ಮಾಡಲು ಕಳುಹಿಸುವ ಅಧಿಕಾರವನ್ನು ರಾಜ್ಯಸರ್ಕಾರಕ್ಕೆ ನೀಡುವುದು '' ಎಂದಿದೆ. ಅದಕ್ಕೂ ಇದಕ್ಕೂ ವ್ಯತ್ಯಾಸ ಇದೆ. ರಾಜ್ಯ ಸರ್ಕಾರ ಕಳುಹಿಸಿದಂಥ ಮೊಕದ್ದಮೆಗಳನ್ನು ಲೋಕಾಯುಕ್ತರಿಗೆ ತನಿಖೆ ಮಾಡುವ ಅಧಿಕಾರ ಇದೆ ಎಂಬುದಕ್ಕೂ ಇದಕ್ಕೂ ವ್ಯತ್ಯಾಸ ಇದೆ. ರಾಜ್ಯಸರ್ಕಾರಕ್ಕೆ ಕಳುಹಿಸುವ ಅಧಿಕಾರ ಲೋಕಾಯುಕ್ತದಲ್ಲಿ ಈಗಾಗಲೇ ಇದೆ.

ಶ್ರೀ ಎ. ಲಕ್ಷ್ಮೀಸಾಗರ್.—ಇಲ್ಲ, ಇಲ್ಲ.

ಶ್ರೀ ಎಂ.ಎಸ್. ಕೃಷ್ಣನ್.—ಇಲ್ಲವೋ ? ಹಾಗಾದರೆ ತಿದ್ದುಪಡಿ ಮಾಡಬೇಕಾಗುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.—ಕೆಲವು ಸಂದರ್ಭಗಳಲ್ಲಿ ಲೋಕಾಯುಕ್ತರಿಗೆ ಅರ್ಜಿ ಹಾಕುವುದಿಲ್ಲ. ನಮಗೆ, ಸರ್ಕಾರಕ್ಕೆ ಕಳುಹಿಸುತ್ತಾರೆ. ಆ ರೀತಿ ಬಂದ ಅರ್ಜಿಗಳಲ್ಲಿ ಸರ್ಕಾರ, ಯಾವುದರಲ್ಲಿ ತನಿಖೆ ಯಾಗಬೇಕು ಎಂದು ಅನ್ನಿಸುತ್ತದೋ, ಮನವರಿಕೆ ಆಗುತ್ತದೋ ಅಂಥವನ್ನು, ಅಂಥ ಅರ್ಜಿಗಳನ್ನು ಕಳುಹಿಸಬಹುದು, ಅವರ ಪರಿಶೀಲನೆಗೆ ತೆಗೆದುಕೊಳ್ಳಬಹುದು ಎಂದು ತಿದ್ದುಪಡಿ.

ಶ್ರೀ ಎಂ. ಎಸ್. ಕೃಷ್ಣನ್.—ರಾಜ್ಯ ಸರ್ಕಾರಕ್ಕೆ ಕಳುಹಿಸುವ ಅಧಿಕಾರ ಇದೆ. ತನಿಖೆ ಮಾಡುವ ಅಧಿಕಾರ ಲೋಕಾಯುಕ್ತರಿಗೆ ಇದೆ. ಕಳುಹಿಸುವ ಅಧಿಕಾರ ರಾಜ್ಯ ಸರ್ಕಾರಕ್ಕಿದೆ. ಯಾವುದನ್ನು ಕಳುಹಿಸಬೇಕು, ಯಾವುದನ್ನು ಕಳುಹಿಸಬಾರದು ಎಂಬುದನ್ನು ತೀರ್ಮಾನ ಮಾಡುವ ಅಧಿಕಾರ ರಾಜ್ಯ ಸರ್ಕಾರಕ್ಕಿದೆ.

ಶ್ರೀ ಎ. ಲಕ್ಷ್ಮೀಸಾಗರ್.—ಅಲ್ಲ.....

ಶ್ರೀ ಎಂ.ಎಸ್. ಕೃಷ್ಣನ್.—ಒಪ್ಪಿಕೊಳ್ಳುತ್ತೇನೆ. ನಮಗೆ ಅನುಮಾನ ಏನೆಂದರೆ ಲೋಕಾಯುಕ್ತರಿಗೆ ಅಧಿಕಾರ ಕೊಡಬೇಕು ಎಂಬ ರೀತಿಯಲ್ಲಿ ತಿದ್ದುಪಡಿ ಉದ್ದೇಶದಲ್ಲಿ ಹೇಳಲಾಗಿದೆ. ಹೇಳಿರುವ ಉದ್ದೇಶಕ್ಕೂ ತಾವು ಬರೆದಿರುವ ೩(೨)ಕ್ಕೂ ಸ್ವಲ್ಪ ವ್ಯತ್ಯಾಸ ಇದೆ. ಈ ವ್ಯತ್ಯಾಸವನ್ನು ತಾವು ಗಮನಿಸಬೇಕು ಎಂದು ಇಷ್ಟು ಮಾತ್ರ ಹೇಳುತ್ತಿದ್ದೇನೆ. ಕನ್ನಡದಲ್ಲಿ ಇದ್ದರೂ ಕೂಡ ವ್ಯತ್ಯಾಸ ಕಂಡು ಬರುತ್ತದೆ. ಎರಡೂ ಓದಿದರೆ 'ಆ' ಬಗ್ಗೆ ನಾನೇನೂ ಹೇಳುವುದಿಲ್ಲ. 'ಇ' ನಲ್ಲಿ ಲೋಕಾಯುಕ್ತರಿಗೆ ಪೋಲೀಸ್ ಮುಖಾಂತರ ಶೋಧನಾ ಅಧಿಪತ್ರವನ್ನು ಸ್ಥಳ ಶೋಧನೆಯಿಲ್ಲದೆ ವ್ಯಕ್ತಿ ಶೋಧನೆಗೂ ಹೊರಡಿಸಲು ಅಧಿಕಾರವನ್ನು ನೀಡುವುದು ಎಂದಿದೆ. ಇದರಲ್ಲಿ ಒಂದು ಮಾತ್ರ ಹೇಳಬೇಕಾಗಿದೆ. ವ್ಯಕ್ತಿಯ ಶೋಧನೆ ಸ್ಥಳ ಶೋಧನೆಯನ್ನು ಯಾವ ಆಧಾರದ ಮೇಲೆ ಮಾಡುತ್ತಾರೆ ? ಹೇಗೆ ಮಾಡುತ್ತಾರೆ ಗೊತ್ತಿಲ್ಲ. ಲೋಕಾಯುಕ್ತ ಕಾನ್‌ಸೆಪ್ಟ್ ಈಗ ಶುರುವಾಗಿದೆ. ಇದು ಹೊಸದಾಗಿ ಬಂದಿದೆ. ಆದ್ದರಿಂದ ಉಪಯೋಗ ಮಾಡುವಾಗ ಉಪಯೋಗಿಸುವುದಕ್ಕೆ ಸರಿಯಲ್ಲದ ರೀತಿಯಲ್ಲಿ ಉಪಯೋಗಿಸುವುದಕ್ಕೆ ಸಾಧ್ಯವಿದೆ. ನಾನು ಅರ್ಥ ಮಾಡಿಕೊಂಡಿರುವುದು, ಯಾರೋ ಒಬ್ಬರು ಲೋಕಾಯುಕ್ತರಿಗೆ ಕಂಪ್ಲೇಂಟ್ ಕೊಡುತ್ತಾರೆ. ಲೋಕಾಯುಕ್ತರಿಗೆ ಕಂಪ್ಲೇಂಟ್ ಕೊಟ್ಟರೆ ಯಾವುದೋ ಒಂದು ಮನೆಗೆ ಪರಿಶೋಧನೆ ಮಾಡಬೇಕಾಗಿ ಬರಬಹುದು. ಪರಿಶೋಧನೆ ಮಾಡಬಹುದು, ಇಲ್ಲ ಎಂಬ ತೀರ್ಮಾನ ಮಾಡುವವರು ಯಾರು ? ಲೋಕಾಯುಕ್ತರೇ ತೀರ್ಮಾನ ಮಾಡಬೇಕಾಗುತ್ತದೆ. ಅಥವಾ ಅವರ ಕೆಳಗಿನ ಅಧಿಕಾರಿಗಳು ತೀರ್ಮಾನ ಮಾಡಬೇಕಾಗುತ್ತದೆ. ಅಥವಾ ಪೋಲೀಸರು ಮಾಡಬೇಕೋ ಗೊತ್ತಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಅಷ್ಟು ಹೊತ್ತಿಗೆ ಸಾಮಾನು ಏನು ಹುಡುಕಬೇಕೋ ಅದು ಮಾಯವಾಗಿರುತ್ತದೆ.

ಶ್ರೀ ಎಂ.ಎಸ್. ಕೃಷ್ಣನ್.—ನಾನು ನನ್ನ ತಲೆಯಲ್ಲಿರುವುದನ್ನು ಹೇಳುತ್ತೇನೆ.

ಅಧ್ಯಕ್ಷರು.—ಹೇಳಿ ಮುಗಿಸಿ, ಆಮೇಲೆ ಹೇಳುತ್ತಾರೆ ಅವರು.

ಶ್ರೀ ಎಂ.ಎಸ್. ಕೃಷ್ಣನ್.—ತಾವು ಸಹಾಯಕ್ಕೆ ಬರಬೇಕು. ಮೊದಲೇ ಕಬ್ಬಿಣದ ಕಡಲೆ. ಇದರ ಜೊತೆಗೆ ಇದರ ಜೊತೆಗೆ ಇದನ್ನೂ ಸೇರಿಸಿದರೆ ತಲೆಯಲ್ಲಿ ಹೋಗುವುದು ಕಷ್ಟವಾಗುತ್ತದೆ. ನನ್ನ ಕಾನ್‌ಸೆಪ್ಟ್ ಏನೆಂದರೆ ಲೋಕಾಯುಕ್ತರಿಗೆ ಕಂಪ್ಲೇಂಟ್ ಕಳುಹಿಸಿದರೆ ಶೋಧನೆಗೆ ಅವಕಾಶ ಇದೆ. ಯಾರ ಶೋಧನೆ ? ಹೇಗೆ ? ಪೋಲೀಸರ ಮುಖಾಂತರವೇ ಎಂಬ ಪ್ರಶ್ನೆ ಬರುತ್ತದೆ. ಶೋಧನೆ ಸರಿಯಾಗಿ ಮಾಡುತ್ತಾರೋ ಸರಿಯಾಗಿ ಮಾಡುವುದಿಲ್ಲವೋ. ಅಧಿಕಾರವನ್ನು ದುರುಪಯೋಗ ಮಾಡುವ ಅಧಿಕಾರ ಇದ್ದರೆ ಖಂಡಿತವಾಗಿ ಈ ಶಿದ್ದುಪಡಿ ಜನರಿಗೆ ವಿರೋಧವಾಗಿ ಹೋಗಬಹುದು. ಏತಕ್ಕೆಂದರೆ ಅವರೇ ಹೇಳಿದ ಹಾಗೆ ಯಾರೋ ಒಬ್ಬ ಸುಳ್ಳು ಕಂಪ್ಲೇಂಟ್ ಕೊಟ್ಟಿದ್ದಾನೆ ಎಂದು ಇಟ್ಟುಕೊಳ್ಳಿ. ಆಗ ಏನಾಗುತ್ತದೆ ? ಸುಳ್ಳು ಕಂಪ್ಲೇಂಟ್ ಕೊಟ್ಟಿದ್ದರೂ ನೋಡಬೇಕು, ಶೋಧನೆ ಮಾಡಬೇಕು. ಶೋಧನೆ ಮಾಡುವುದಕ್ಕೆ ಹೋದಾಗ ಇಷ್ಟಬಂದ ರೀತಿಯಲ್ಲಿ ಅಧಿಕಾರ ದುರುಪಯೋಗ ಪಡಿಸಿಕೊಂಡರೆ ಖಂಡಿತವಾಗಿ ಕಂಪ್ಲೇಂಟ್ ಕೊಟ್ಟಿರುವವರ ಮೇಲೆ ಅನಾಹುತವಾಗುತ್ತದೆ, ಅಘಾತವಾಗುತ್ತದೆ, ಪರಿಣಾಮ ಕೆಟ್ಟದ್ದಾಗುತ್ತದೆ. ಮಂತ್ರಿಗಳು ಹೇಳಿದ ಹಾಗೆ ಅವರಿಗೆ ಕೇಸ್ ಹಾಕುವುದಕ್ಕೆ ಅಧಿಕಾರ ಇದೆ. ಅದಕ್ಕೆ ಲೋಕಾಯುಕ್ತರು ಒಪ್ಪಿಕೊಂಡರೆ, ಅದು ಬೇರೆ ಸಮಾಚಾರ. ಆದರೆ ಇನಿಷಿಯಲ್ ಸ್ಟೇಜಿನಲ್ಲಿ ಇಷ್ಟೊಂದು ದೊಡ್ಡ ಅಧಿಕಾರ ಕೊಡಬೇಕೇ ಎಂಬ ಸಂಶಯ ಉಂಟಾಗುತ್ತದೆ. ಎಸ್ಮಾ ಮತ್ತು ನ್ಯಾಷನಲ್ ಸೆಕ್ಯೂರಿಟಿ ಆಕ್ಟ್ ಕೇಂದ್ರಸರ್ಕಾರದವರು ಮಾಡಿಟ್ಟಿದ್ದಾರೆ. ಅದರಲ್ಲಿ ಕೂಡ ಅಧಿಕಾರ ದುರುಪಯೋಗಪಡಿಸಿಕೊಂಡಿರುವ ನಿದರ್ಶನ ಇದೆ. ಇದರ ಉದ್ದೇಶ ಒಳ್ಳೆಯದಿರಬಹುದು. ಆದರೆ ಜಾರಿಗೆ ಬರುವಾಗ ಉದ್ದೇಶಕ್ಕೆ ವಿರುದ್ಧವಾಗಿ ಜಾರಿಗೆ ಬರುತ್ತದೆ, ಕಾರ್ಮಿಕರ ಮೇಲೆ ಮತ್ತಿತರರ ಮೇಲೆ ಆ ರೀತಿ ನಡೆದಿದೆ. ಎಸ್ಮಾ ಅಥವಾ ನ್ಯಾಷನಲ್ ಸೆಕ್ಯೂರಿಟಿ ಆಕ್ಟ್ ತರಹ ಇದು ಅಲ್ಲದಿದ್ದರೂ ಅಧಿಕಾರ ಕೊಡುವಾಗ ದುರುಪಯೋಗ ಆಗದೇ ಇರುವ ರೀತಿಯಲ್ಲಿ ಅಧಿಕಾರ ಕೊಡಬೇಕು. ಚೆಕ್ಸ್ ಅಂಡ್ ಕೌಂಟರ್ ಚೆಕ್ಸ್ ಇರಬೇಕು. ಇದರಲ್ಲಿ ಅದು ಕಂಡು ಬರುವುದಿಲ್ಲ. ಮೂರನೆಯದಾಗಿ ಲೋಕಾಯುಕ್ತರಲ್ಲಿ ಕೆಲಸ ಮಾಡುತ್ತಿರುವ ಎಲ್ಲಾ ಅಧಿಕಾರಿಗಳನ್ನೂ ಮತ್ತು ಇತರ ಸಿಬ್ಬಂದಿವರ್ಗದವರನ್ನೂ ಲೋಕಾಯುಕ್ತರ ಆಡಳಿತ ಅಧೀನ ಮತ್ತು ಶಿಸ್ತಿನ ಹಿಡಿತದಲ್ಲಿ ತರುವುದು ಎಂದು ಹೇಳಿದ್ದೀರಿ.

ಶ್ರೀ ಎ. ಲಕ್ಷ್ಮೀಸಾಗರ್.—ಅಡ್ಮಿನಿಸ್ಟ್ರೇಟಿವ್ ಅಂಡ್ ಡಿಸಿಪ್ಲಿನರಿ ಕಂಟ್ರೋಲ್.

ಶ್ರೀ ಎಂ.ಎಸ್. ಕೃಷ್ಣನ್.—ಅರ್ಥವಾಯಿತು. ಮಸೂದೆಯ ಕಲಂ ೯ನ್ನು ನೋಡಿದರೆ ಪ್ರಕರಣ ೧೫ಕ್ಕೆ ತಿದ್ದುಪಡಿ ತಾನೇ ಅದು ?

ಪುಟ ೪ರಲ್ಲಿ ಪ್ರಿಂಟ್ ಆಗಿರುವುದು ಹೀಗಿದೆ:

" ೯. ಪ್ರಕರಣ ೧೫ಕ್ಕೆ ತಿದ್ದುಪಡಿ.—ಮೂಲ ಅಧಿನಿಯಮದ ಪ್ರಕರಣ ೧೫ರಲ್ಲಿ—

(೧) ಉಪ ಪ್ರಕರಣ (೧)ಕ್ಕೆ, ಈ ಮುಂದಿನ ಉಪಪ್ರಕರಣವನ್ನು ಪ್ರತಿಸ್ಥಾಪಿಸತಕ್ಕದ್ದು ಮತ್ತು ಅದು ಯಾವಾಗಲೂ ಪ್ರತಿಸ್ಥಾಪಿತವಾಗಿರುವುದಾಗಿ ಭಾವಿಸತಕ್ಕದ್ದು, ಎಂದರೆ. —

" (೧) ಲೋಕಾಯುಕ್ತ ಮತ್ತು ಉಪಲೋಕಾಯುಕ್ತ ಅಥವಾ ಉಪಲೋಕಾಯುಕ್ತರು ಈ ಅಧಿನಿಯಮದ ಮೇರೆಗಿನ ತಮ್ಮ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ ಅವರಿಗೆ ನೆರವಾಗಲು ನಿಯಮಿಸ ಬಹುದಾದಂಥ ಅಧಿಕಾರಿಗಳು ಮತ್ತು ನೌಕರರು ಇರತಕ್ಕುದು."

(೨) ಉಪಪ್ರಕರಣ (೨)ರಲ್ಲಿ, " ಲೋಕಾಯುಕ್ತ ಅಥವಾ ಉಪಲೋಕಾಯುಕ್ತರು ಅಥವಾ " ಉಪ " ಎಂಬ ಪದಗಳನ್ನು ಲೋಪಿಸತಕ್ಕುದು ಮತ್ತು ಯಾವಾಗಲೂ ಲೋಪಿಸಲಾಗಿದೆಯೆಂದು ಭಾವಿಸತಕ್ಕುದು.

(೧) ಉಪಪ್ರಕರಣ (೩)ರಲ್ಲಿ, ಖಂಡ (ಎ)ಗೆ, ಈ ಮುಂದಿನ ಖಂಡಗಳನ್ನು ಪ್ರತಿಸ್ಥಾಪಿಸತಕ್ಕುದು ಎಂದರೆ,—

"(ಎ) ರಾಜ್ಯ ಸರ್ಕಾರದ ಯಾವೊಬ್ಬ ಅಧಿಕಾರಿ ಅಥವಾ ತನಿಖಾ ವಿಜೆನ್ಸಿಯ ಸೇವೆಯನ್ನು,

(ಎಎ) ಕೇಂದ್ರ ಸರ್ಕಾರದ ಪೂರ್ವ. ಸಹಮತಿಯನ್ನು ಪಡೆದು ಆ ಸರ್ಕಾರದ ಯಾವೊಬ್ಬ ಅಧಿಕಾರಿ ಅಥವಾ ತನಿಖಾ ಏಜೆನ್ಸಿಯ ಸೇವೆಯನ್ನು ಅಥವಾ ''

(೪) ಉಪಪ್ರಕರಣ (೩)ರ ತರುವಾಯ, ಈ ಮುಂದಿನ ಉಪಪ್ರಕರಣವನ್ನು ಸೇರಿಸತಕ್ಕದ್ದು ಮತ್ತು ಯಾವಾಗಲೂ ಸೇರಿಸಿರುವುದಾಗಿ ಭಾವಿಸತಕ್ಕದ್ದು, ಎಂದರೆ.—

'' (೪) ಉಪ-ಪ್ರಕರಣ (೧)ರಲ್ಲಿ ಉಲ್ಲೇಖಿಸಲಾಗಿರುವ ಅಧಿಕಾರಿಗಳು ಮತ್ತು ಇತರ ನೌಕರರು ಲೋಕಾಯುಕ್ತನ ಆಡಳಿತಾತ್ಮಕ ಮತ್ತು ಶಿಸ್ತುಪಾಲನೆಯ ನಿಯಂತ್ರಣದಡಿಯಲ್ಲಿರತಕ್ಕದ್ದು, ...'' ಎಂದಿದೆ.

ಕಡೆಯದು ನಾಲ್ಕರಲ್ಲಿ ಬಂದಿದೆ. ಮೊದಲನೆಯದರಲ್ಲಿ ಲೋಕಾಯುಕ್ತ ಮತ್ತು ಉಪಲೋಕಾಯುಕ್ತ ಅಥವಾ ಉಪಲೋಕಾಯುಕ್ತರು ತಮ್ಮ ಪ್ರಕಾರ್ಯವನ್ನು ನಿರ್ವಹಿಸುವಲ್ಲಿ ನೆರವಾಗಲು ನಿಯಮಿಸ ಬಹುದಾದಂಥ ಅಧಿಕಾರಿಗಳು ಮತ್ತು ನೌಕರರು ಇರತಕ್ಕದ್ದು ಎಂದಿದೆ. ಇಲ್ಲಿ ಈ ಎರಡರಲ್ಲಿ ವಿರೋಧಾಭಾಸ ಆಗುತ್ತದೆ. ನಾನು ತಿಳಿದುಕೊಂಡಿರುವ ಅರ್ಥ ತಪ್ಪೋ ಸರಿಯೋ ತಾವು ವಿವರಣೆ ಕೊಡಬೇಕು. ನಿಮ್ಮ ಅಭಿಪ್ರಾಯ ಏನಿದೆ ಎಂದರೆ ಶಿಸ್ತಿನ ಕ್ರಮ ತೆಗೆದುಕೊಳ್ಳುವುದಕ್ಕೆ ಲೋಕಾಯುಕ್ತರಿಗೆ ಅಧಿಕಾರ ಇರಬೇಕು ಎಂಬ ಅಭಿಪ್ರಾಯ ಇರುವ ಹಾಗೆ ಕಾಣುತ್ತದೆ. ಆಡಳಿತಾತ್ಮಕ ಮತ್ತು ಶಿಸ್ತಿನ ಕ್ರಮ ತೆಗೆದುಕೊಳ್ಳುವುದಕ್ಕೆ ಲೋಕಾಯುಕ್ತರಿಗೆ ಅಧಿಕಾರ ಇರಬೇಕು ಎಂದು ಹೇಳುತ್ತೀರಿ. ಯಾರ ಮೇಲೆ ?

ಶ್ರೀ ಎ. ಲಕ್ಷ್ಮೀಸಾಗರ್.—ಸೇವಾ ವೃತ್ತಿಯಲ್ಲಿ ಯಾರನ್ನು ಸೇರಿಸಬೇಕು ಎಂದು ಹೇಳಿದೆ. ರಾಜ್ಯ ಸರ್ಕಾರದ ಯಾವ ಒಬ್ಬ ಅಧಿಕಾರಿ ಅಥವಾ ಏಜೆನ್ಸಿಯ ಸೇವೆಯನ್ನು ತೆಗೆದುಕೊಳ್ಳಬಹುದು. ಕೇಂದ್ರ ಸರ್ಕಾರದ ಪೂರ್ವ ಸಹಮತಿಯನ್ನು ಪಡೆದು ಆ ಸರ್ಕಾರದ ಯಾವೊಬ್ಬ ಅಧಿಕಾರಿ ಅಥವಾ ತನಿಖಾ ಏಜೆನ್ಸಿಯ ಸೇವೆಯನ್ನು ಅಥವಾ ಉಪಪ್ರಕರಣ (೩)ರ ತರುವಾಯ ಈ ಮುಂದಿನ ಉಪ ಪ್ರಕರಣವನ್ನು ಎಂದರೆ ಉಪಪ್ರಕರಣ (೧)ರಲ್ಲಿ ಉಲ್ಲೇಖಿಸಲಾಗಿರುವ ಅಧಿಕಾರಿಗಳು ಮತ್ತು ಇತರ ನೌಕರರು ಲೋಕಾಯುಕ್ತರ ಆಡಳಿತ್ಮಾಕ ಮತ್ತು ಶಿಸ್ತು ಪಾಲನೆಯ ನಿಯಂತ್ರಣದಡಿಯಲ್ಲಿ ಇರ ತಕ್ಕುದು ಎಂದು ಹೇಳಿದೆ. That is, Loka Ayukta and Upa-Lokayukta are authorised, under this provision, to get the services of any state Government officer or Central Government officer, with previous permission of the Central Government and all such officers will be under the administrative and disciplinary control of Loka Ayukta.

ಶ್ರೀ ಎಂ. ಎಸ್. ಕೃಷ್ಣನ್.—ನನ್ನದು ಒಂದೇ ಸಮಸ್ಯೆ ಎಂದರೆ ಅಡ್ಮಿನಿಸ್ಟ್ರೇಟೀವ್ ಕಂಟ್ರೋಲ್ ಎಂಬುದರಲ್ಲಿ ಭಿನ್ನಾಭಿಪ್ರಾಯ ಇಲ್ಲ. ರಾಜ್ಯ ಸರ್ಕಾರಿ ನೌಕರರು, ಕೇಂದ್ರ ಸರ್ಕಾರಿ ನೌಕರರ ಸೇವೆಯನ್ನು ಪಡೆದುಕೊಳ್ಳಬೇಕು ಎಂದು ಶೀರ್ಮಾನ ಆದರೆ ಅಡ್ಮಿನಿಸ್ಟ್ರೇಟಿವ್ ಕಂಟ್ರೋಲ್ ಒಂದೇ ಅಲ್ಲ, ಡಿಸಿಪ್ಲಿನರಿ ಕಂಟ್ರೋಲ್ ವಿಚಾರ ಬಂದಾಗ ವಿರೋಧಾಭಾಸ ಆಗುತ್ತದೆ ಎಂಬ ಅನುಮಾನ ಇದೆ. ನಾನು ವಿಷಯ ತಿಳಿದುಕೊಳ್ಳದೇ ಇರಬಹುದು. ಆದರೆ ನಾನು ಹೇಳಿದ್ದನ್ನು ಕೇಳಿ ತಾವು ಉತ್ತರ ಕೊಡಿ. ನನಗೆ ಏತಕ್ಕೆ ಅನುಮಾನ ಎಂದರೆ ಸೆಂಟ್ರಲ್ ಟ್ರಿಬ್ಯುನಲ್‌ಗಳನ್ನು ಈಗ ಮಾಡಿದ್ದಾರೆ. ಸೇವಾ ನಿಯಮಗಳ ಪ್ರಕಾರ ಕೇಂದ್ರ ಸರ್ಕಾರಿ ನೌಕರರ ಮೇಲೆ ಕ್ರಮ ತೆಗೆದು ಕೊಂಡರೆ ಅವರು ಅಪೀಲ್ ಹಾಕಿ ಶೀರ್ಮಾನ ತೆಗೆದುಕೊಳ್ಳುವುದಕ್ಕೆ ಸೆಂಟ್ರಲ್ ಟ್ರಿಬ್ಯುನಲ್ ಮಾಡಿದೆ. ಅದು ತಮಗೆ ಗೊತ್ತಿದೆ. ಪೇಪರ್‌ನಲ್ಲಿ ಬಂದಿದೆ. ಸ್ಟೇಟ್ ಟ್ರಿಬ್ಯುನಲ್ ಮಾಡಬೇಕೆಂದೂ ಇದೆ. ಆದರೆ ಇನ್ನೂ ಮಾಡಿಲ್ಲ. ಮಾಡಿದ್ದರೆ ಹೇಳಿ. ಲೋಕಾಯುಕ್ತರಿಗೆ ಆಕ್ಷನ್ ತೆಗೆದುಕೊಳ್ಳುವುದಕ್ಕೆ ಅಧಿಕಾರ ಕೊಡುತ್ತೀರಿ. ಯಾವ ಆಧಾರದ ಮೇಲೆ, ಯಾವ ಪ್ರೊಸೀಜರ್ ಮತ್ತು ಸೇವಾ ನಿಯಮಗಳ ಆಧಾರದ ಮೇಲೆ ಆಕ್ಷನ್ ತೆಗೆದುಕೊಳ್ಳುತ್ತಾರೆ ಎಂಬುದರ ಬಗ್ಗೆ ಸ್ಪಷ್ಟತೆ ಇರಬೇಕು,

೨-೦೦ ಪಿ.ಎಂ.

ಏಕೆಂದರೆ Lokayukta might be the creature of our Legislature. ಇದ್ದರೂ ಸಹ ಅವರನ್ನು ನಾವು ಬೇರೆ ರೀತಿಯಲ್ಲಿ ನೋಡುವುದಕ್ಕಾಗುವುದಿಲ್ಲ. ಅದು ಜುಡಿಷಿಯರಿ ಫಂಕ್ಷನ್ ಆಗುತ್ತದೆ. ಇಲ್ಲಿ ನ್ಯಾಯ ಎಷ್ಟುಮಟ್ಟಿಗೆ ಸಿಕ್ಕುತ್ತದೆ ಎಂಬುದನ್ನು ನಾವು ಯೋಚನೆ ಮಾಡ

ಬೇಕಾಗುತ್ತದೆ. ಈ ರೀತಿ ಡಿಸಿಪ್ಲಿನರಿ ಆಕ್ಷನ್ ತೆಗೆದುಕೊಳ್ಳುವ ಬಗ್ಗೆ ಬೇರೆ ಕಡೆ ಮಾಡಿದ್ದಾರೆಯೆ? ಎಂಬುದನ್ನು ನೋಡಬೇಕು. ಮೊದಲೇ ಹಕ್ಕು ಕೊಟ್ಟಿದ್ದರೆ ಅವರ ವಿಚಾರಧಾರೆ, ತೀರ್ಮಾನ ಏನಿದೆ ಅದಕ್ಕೆ ಚ್ಯುತಿ ಬರಬಹುದೆಂಬ ಸಂಶಯ ನನಗೆ ಇದೆ.

ಇನ್ನು ಎರಡನೆಯದಾಗಿ ಶಿಕ್ಷೆಯ ಕ್ರಮ ತೆಗೆದುಕೊಳ್ಳಲಾಗುತ್ತದೆ ಎಂದು ಹೇಳಿದ್ದೀರಿ. ಆ ಕ್ರಮ ಏನು ಎಂಬುದನ್ನು ತಿಳಿದುಕೊಳ್ಳಬೇಕಾಗಿದೆ. Whether they are governed by all those rules which are prevalent at present in the State Civil Conduct Rules or the Central Conduct rules? ಇದನ್ನು ಸ್ಪಷ್ಟೀಕರಣ ಮಾಡಬೇಕೆಂದು ಕೇಳಿಕೊಂಡು ಇಷ್ಟು ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಅಧ್ಯಕ್ಷರೆ, ಕಾನೂನುಗಳನ್ನು ಮಾಡುವಾಗ ಪ್ರತಿಯೊಂದು ಅಂಶವನ್ನೂ ನಾವು ಆಳವಾಗಿ ಅಧ್ಯಯನ ಮಾಡಿ ನೋಡಬೇಕಾಗಿದೆ. ಏಕೆಂದರೆ, ಇತ್ತೀಚೆಗೆ ಕಾನೂನುಗಳ ದುರುಪಯೋಗ ಬಹಳ ಆಗುತ್ತಿದೆ. ಇದರಿಂದಾಗಿ ಕಾನೂನುಗಳನ್ನು ವಿರೋಧಿಸುವುದೂ ಕೂಡ ಒಂದು ಟ್ರೆಡಿಷನ್ ಆಗಿದೆ. ಐ.ಪಿ.ಸಿ.ಯಲ್ಲಿರತಕ್ಕ ಎಲ್ಲಾ ಕಾನೂನುಗಳೂ ಈ ಮಸೂದೆಯಲ್ಲಿವೆ. ಇಲ್ಲಿ ಕೊಟ್ಟಿರತಕ್ಕ ೪ ಪ್ರಕರಣ ೯ರ ತಿದ್ದುಪಡಿಯಲ್ಲಿ ಈ ರೀತಿ ಹೇಳಿದೆ:

> ''ಮೂಲ ಅಧಿನಿಯಮದ ಪ್ರಕರಣ ೯ರಲ್ಲಿ, ಉಪಪ್ರಕರಣ (೭)ರಲ್ಲಿ ''ಈ ಅಧಿನಿಯಮದ ಮೇರೆಗೆ'' ಮತ್ತು ''ಯಾವೊಬ್ಬ ಸಾರ್ವಜನಿಕ ನೌಕರನ'' ಎಂಬ ಪದಗಳಿಗೆ ಅನುಕ್ರಮವಾಗಿ ''ಈ ಅಧಿನಿಯಮದ ಮೇರೆಗೆ ಯಾವೊಬ್ಬ ಸಾರ್ವಜನಿಕ ನೌಕರನ ವಿರುದ್ಧ'' ಮತ್ತು ಯಾವೊಬ್ಬ ಇತರ ಸಾರ್ವಜನಿಕ ನೌಕರನ ''ಎಂಬ ಪದಗಳನ್ನು ಪ್ರತಿಸ್ಥಾಪಿಸತಕ್ಕದ್ದು ಮತ್ತು ೫ ಪ್ರಕರಣ ೧೦ರ ತಿದ್ದುಪಡಿ ಮೂಲ ಅದಿನಿಯಮದ ಪ್ರಕರಣ ೧೦ರಲ್ಲಿ ಉಪಪ್ರಕರಣ (೧)ರಲ್ಲಿ, ಖಂಡ (ಬಿ)ಯಲ್ಲಿ (೧) ''ಅವನು ತನಿಖೆ ಇನ್‌ಸ್ಪೆಕ್ಟರ್ (ಸಾಮಾನ್ಯ) ಅಥವಾ ಪೋಲೀಸ್ ಇನ್‌ಸ್ಪೆಕ್ಟರ್ ದರ್ಜೆಗೆ ಕಡಿಮೆಯಿಲ್ಲದ ಯಾವೊಬ್ಬ ಪೋಲೀಸ್ ಅಧಿಕಾರಿಯನ್ನು'' ಎಂಬ ಪದಗಳು ಮತ್ತು ಆವರಣಗಳಿಗೆ, ''ಅವನು ಅದಕ್ಕನುಸಾರವಾಗಿ ತನಿಖೆಯನ್ನು ಕೈಗೊಳ್ಳಲು ಅಥವಾ ಶೋಧನೆಯನ್ನು ನಡೆಸಲು ಪೋಲೀಸ್ ಇನ್‌ಸ್ಪೆಕ್ಟರ್ ದರ್ಜೆಗೆ ಕಡಿಮೆ ಇಲ್ಲದ ಯಾವೊಬ್ಬ ಪೋಲೀಸ್ ಅಧಿಕಾರಿಯನ್ನು ಮತ್ತು ವಿಶೇಷವಾಗಿ'' ಎಂಬ ಪದಗಳನ್ನು ಪ್ರತಿಸ್ಥಾಪಿಸತಕ್ಕದ್ದು ಎಂದು ಇದೆ.

ಇದರ ಕೆಳಗಡೆ (೨) ಉಪಖಂಡ (೧)ರ ತರುವಾಯ ಈ ಮುಂದಿನವುಗಳನ್ನು ಸೇರಿಸತಕ್ಕದ್ದು ಎಂದರೆ:

> ''(೧ಎ) ಶೋಧನೆಯನ್ನು ನಡೆಸಬೇಕಾದ ಯಾವುದೇ ವಸ್ತುವನ್ನು ತನ್ನಲ್ಲಿ ಬಚ್ಚಿಟ್ಟು ಕೊಂಡಿದ್ದಾನೆಂದು ಸಕಾರಣವಾಗಿ ಸಂದೇಹಕ್ಕೊಳಗಾಗುವ ಯಾವೊಬ್ಬ ವ್ಯಕ್ತಿಯನ್ನು ಶೋಧಿಸಲು.....''

ಎಂದು ಇದೆ. ನಾನಾದರೂ ಹೇಳುವುದೇನೆಂದರೆ, ಪೋಲೀಸರಿಗೆ ಒಂದು ಲಿಮಿಟೇಷನ್ ಕೊಡಬೇಕು. ಅವರ ಪವರ್ಸ್ ಕಂಟ್ರೋಲ್ ಮಾಡಬೇಕು. ಅವರಿಗೆ ಸರ್ಚ್ ವಾರಂಟನ್ನು ಕೊಡುವಾಗ ಲೋಕಾಯುಕ್ತ ಅಥವಾ ಉಪಲೋಕಾಯುಕ್ತರವರು ಕೊಡಬೇಕು ಎನ್ನತಕ್ಕ ಒಂದು ಪ್ರಾವಿಷೋ ಹಾಕಬೇಕು.

ಇನ್ನೊಂದು ಮುಖ್ಯ ವಿಚಾರ ಎಂದರೆ, ಸರ್ಕಾರಕ್ಕೆ ಉಚ್ಚ ಅಧಿಕಾರವನ್ನು ಕೊಡತಕ್ಕದ್ದು. ಎಂದು ಇದೆ. ಹೀಗೆ ಮಾಡಿದರೆ ಲೋಕಾಯುಕ್ತ ಮತ್ತು ಉಪ ಲೋಕಾಯುಕ್ತವನ್ನು ಮಾಡಿಯೂ ಏನೂ ಪ್ರಯೋಜನವಾಗುವುದಿಲ್ಲ. ಇವತ್ತು ಒಂದು ಸರ್ಕಾರ ಇರಬಹುದು, ನಾಳೆ ಇನ್ನೊಂದು ಸರ್ಕಾರ ಬರಬಹುದು. ಆದ್ದರಿಂದ ಉಪಲೋಕಾಯುಕ್ತ ಅಥವಾ ಲೋಕಾಯುಕ್ತ ಏನು ನಿರ್ಣಯ ಮಾಡುತ್ತದೆ ಅದನ್ನು ಒಪ್ಪಬೇಕೆಂಬ ತತ್ವವನ್ನು ಇದರಲ್ಲಿ ಅಳವಡಿಸಬೇಕು.

ಇನ್ನು ಮೂರನೆಯದಾಗಿ ಹೋಗುತ್ತಾ ಹೋಗುತ್ತಾ ಮ್ಯಾನೇಜ್‌ಮೆಂಟ್ ಡೈಲ್ಯೂಟ್ ಆಗುತ್ತದೆ. ಪ್ರಕರಣ ೨೦ರ ತಿದ್ದುಪಡಿ (೨ಎ)ನಲ್ಲಿ.

''(೨ಎ) ಯಾವ ವ್ಯಕ್ತಿಯು ವಿರುದ್ಧ ಸುಳ್ಳು ಕ್ಷುಲ್ಲಕ ಅಥವಾ ಕಿರುಕುಳಕಾರಿಯಾದ ಫಿರ್ಯಾದನ್ನು ಮಾಡಲಾಗಿದೆಯೋ ಆ ವ್ಯಕ್ತಿಯು ಸಂದರ್ಭಾನುಸಾರ, ಲೋಕಾಯುಕ್ತ ಅಥವಾ ಉಪಲೋಕಾಯುಕ್ತನ ಪೂರ್ವ ಮಂಜೂರಾತಿಯನ್ನು ಪಡೆದು ನೀಡಿದ ಫಿರ್ಯಾದಿನ ಹೊರತು ಯಾವುದೇ ಅಂಥ ನ್ಯಾಯಾಲಯವು ಉಪಪ್ರಕರಣ (೧)ರ ಮೇರೆಗಿನ ಅಪರಾಧದ ಸಂಜ್ಞಾನವನ್ನು ತೆಗೆದುಕೊಳ್ಳತಕ್ಕದಲ್ಲ''

ಎಂದು ಇದೆ. ಆದರೆ ಈಗ ತೆಗೆದುಕೊಳ್ಳಬಹುದೆಂದು ತಿದ್ದುಪಡಿಯನ್ನು ತರಲಾಗಿದೆ. ನೂರು ಪ್ರಕರಣಗಳು ನಡೆದರೆ ಅದರಲ್ಲಿ ಒಬ್ಬರೂ ಕೂಡ ಫಿರ್ಯಾದು ಕೊಡುವುದಿಲ್ಲ. ಒಂದುವೇಳೆ ಫಿರ್ಯಾದು ಕೊಡುತ್ತಾರೆಂದು ಇಟ್ಟುಕೊಳ್ಳೋಣ ಆದರೆ ಅದನ್ನು ಸಾಬೀತು ಮಾಡುವುದು ಬಹಳ ಕಷ್ಟ. ಅವನು ಸಾಬೀತು ಮಾಡಲು ಸಾಧ್ಯವಾಗದೇ ಹೋದರೆ ಅವನ ಮೇಲೆಯೇ ಒಂದು ಕೇಸು ಶುರುವಾಗುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.—ಕ್ರಿಮಿನಲ್ ಲಾ ನಲ್ಲಿ ಮೆಲಿಷಿಯಸ್ ಪ್ರಾಸಿಕ್ಯೂಷನ್‌ಗೆ ಪ್ರಾವಿಷನ್ ಇದೆಯೋ, ಇಲ್ಲವೋ?

ಶ್ರೀ ಆರ್. ವೆಂಕಟರಾವಮಯ್ಯ.—ನಾನೂ ಅದನ್ನೇ ಹೇಳುತ್ತಿರುವುದು. ಇದರಲ್ಲಿ ಮೆಲಿಷಿಯಸ್ ಪ್ರಾಸಿಕ್ಯೂಷನ್ ಎಂದು ಇದೆ. If the complaint is *bonafied*, he cannot be prosecuted ಎಂದು ಇದೆ. ಇದು ಮಾನ್ಯ ಲಕ್ಷ್ಮೀಸಾಗರ್‌ರವರಿಗೆ ಗೊತ್ತಿದೆ. ಹೀಗಾದರೆ ಫಿರ್ಯಾದು ಕೊಡಲು ಯಾರು ಮುಂದೆ ಬರುತ್ತಾರೆ? ಈಗಾಗಲೇ ಹೇಳಿದಂತೆ ದೂರು ಕೊಡುವುದು ಬಹಳ ಸುಲಭ. ಆದರೆ ಅದನ್ನು ಸಾಬೀತು ಮಾಡುವುದು ಅಷ್ಟೇ ಕಷ್ಟ. ಲೋಕಾಯುಕ್ತವನ್ನು ಮಾಡಿರತಕ್ಕದ್ದು ಏತಕ್ಕೆಂದರೆ ಕೆಲವರು ಕಂಟ್ರೋಲನ್ನು ಬಿಟ್ಟು ಹೋಗಿರುತ್ತಾರೆಂದು. ಆದರೆ ಅವರನ್ನು ಮೊದಲೇ ಹೆದರಿಸಿದರೆ ಯಾರೂ ಕೂಡ ದೂರು ಕೊಡುವುದಕ್ಕೆ ಮುಂದೆಬರುವುದಿಲ್ಲ. ಹೈಕೋರ್ಟಿನಲ್ಲಿ A person can be prosecuted if he gives frivolous complaint or if there is no semblance of truth in his complaint. There are restrictions. ಅದು ಇಲ್ಲಿ ಇಲ್ಲ, ಕಂಪ್ಲೈಂಟ್‌ನ್ನು ಯಾರೂ ಕೊಡುವುದಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ನೀವು ಸರಿಯಾಗಿ ನೋಡಿಲ್ಲ. ಈ ರೀತಿ ಕಂಪ್ಲೈಂಟ್ ಹಾಕಿದ್ದುದು ಸರಿಯಲ್ಲ, ಅದು ಅನೂರ್ಜಿತ, ಇದಕ್ಕೆ ಫ್ರಿವಲಸ್ ಮೆಲಿಷಿಯಸ್ ಎಂದು ಇರಬಹುದು ಎಂದು ತೀರ್ಮಾನವಾದರೆ ಸುಳ್ಳು ಕಂಪ್ಲೈಂಟ್ ಕೊಟ್ಟವರ ಮೇಲೆ ಕ್ರಮ ತೆಗೆದುಕೊಳ್ಳಬೇಕಾದರೆ ಲೋಕಾಯುಕ್ತ ಅಥವಾ ಉಪಲೋಕಾಯುಕ್ತರ ಪೂರ್ವಭಾವಿ ಅನುಮತಿ ಬೇಕು.

ಶ್ರೀ ಆರ್. ವೆಂಕಟರಾಮಯ್ಯ.—ಯಾರೂ ಕೂಡ ಕಂಪ್ಲೈಂಟ್ ಕೊಡುವುದಕ್ಕೆ ಬರುವುದಿಲ್ಲ. ಲೋಕಾಯುಕ್ತ ಅಥವಾ ಉಪಲೋಕಾಯುಕ್ತರು ಅನುಮತಿ ಕೊಟ್ಟರೆ ಆಗ ರಾಜಕಾರಣಿಗಳು ಮತ್ತು ಅಧಿಕಾರಿಗಳು ಹತೋಟಿಗೆ ಬರುತ್ತಾರೆಂದು ನಾವು ತಿಳಿದುಕೊಂಡಿದ್ದೆವು. ಆದರೆ ಸರ್ಕಾರದ ಬೊಕ್ಕಸದಿಂದ ವ್ಯರ್ಥಾ ಹಣ ಹೆಚ್ಚು ಹೆಚ್ಚು ಖರ್ಚಾಗುತ್ತಿದೆಯೇ ಹೊರತು ಯಾವ ಪ್ರಯೋಜನವೂ ಆಗುತ್ತಿಲ್ಲ. ಫಿರ್ಯಾದು ಕೊಡುವವರು ಎಂದರೆ ವೀಕರ್ ಸೆಕ್ಷನ್‌ಗೆ ಸೇರಿದವರು. ಸಾಮಾನ್ಯವಾಗಿ ಅವರು ಕಂಪ್ಲೈಂಟ್ ಕೊಡುವುದೇ ಕಷ್ಟ, ಒಂದು ವೇಳೆ ಕೊಟ್ಟರೂ ಕೂಡ ಅವರಿಗೆ ಸಾಕ್ಷಿ ಹೇಳುವುದಕ್ಕೆ ಯಾರೂ ಬರುವುದಿಲ್ಲ. ಆದರೆ ಪ್ರತಿಷ್ಠಿತ ವ್ಯಕ್ತಿ ಇರುತ್ತಾನೆ ಅವನು ಬಹಳ ಜಬರ್ದಸ್ತಾಗಿ ತಿರುಗುತ್ತಿರುತ್ತಾನೆ. ಆದ್ದರಿಂದ ಫಿರ್ಯಾದಿಗಳಿಗೆ ರಕ್ಷಣೆ ಕೊಡಬೇಕು. ಐ.ಪಿ.ಸಿ.ಯಲ್ಲಿ ಅಥವಾ ಸಿ.ಆರ್.ಪಿ.ಸಿ. ಯಲ್ಲಿರುವಂತೆ ಲೀಗಲ್ ಆಗಿ ಪ್ರೊಟಕ್ಷನ್ ಕೊಡಿ. ಇಲ್ಲದೇ ಹೋದರೆ ಯಾರಾದರೂ ಕೋಪಿಷ್ಟರು ಲೋಕಾಯುಕ್ತ ಅಥವಾ ಉಪಲೋಕಾಯುಕ್ತರಾಗಿ ಬಂದರೆ ಅಂಥ ಸಂದರ್ಭದಲ್ಲಿ ಬಡವರು ಯಾರೂ ಕೂಡ ಕಂಪ್ಲೈಂಟ್ ಕೊಡುವುದಕ್ಕೆ ಬರುವುದಿಲ್ಲ ಎನ್ನತಕ್ಕ ಮಾತನ್ನು ನಾನು ಹೇಳಬಯಸುತ್ತೇನೆ.

† ಶ್ರೀ ಕೆ.ಹೆಚ್. ಪಾಟೀಲ್ (ಗದಗ್).—ಮಾನ್ಯ ಅಧ್ಯಕ್ಷರೇ ಕರ್ನಾಟಕ ಲೋಕಾಯುಕ್ತ ವಿಧೇಯಕ ತಿದ್ದುಪಡಿಯನ್ನು ನಮ್ಮ ಸದನದ ಎದುರಿಗೆ ತಂದಿದ್ದಾರೆ. ಇದರ ಬಗ್ಗೆ ವಿರೋಧ ಮಾಡಿದರೆ ಲೋಕಾಯುಕ್ತವನ್ನೇ ವಿರೋಧ ಮಾಡುತ್ತಾರೆ ಎನ್ನುವ ಭಾವನೆ ಜನರಲ್ಲಿ ಹುಟ್ಟುತ್ತದೆ.

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಈ ತಿದ್ದುಪಡಿಯನ್ನು ಓದಿದರೆ ಇದು ನಿಜವಾಗಿಯೂ ಅರ್ಥರಹಿತವಾಗಿದೆ ಎಂಬುದನ್ನು ಮಾನ್ಯ ಮಂತ್ರಿಗಳೇ ಒಪ್ಪಿಕೊಳ್ಳಬೇಕಾಗುತ್ತದೆ. ಲೋಕಾಯುಕ್ತ ಆದನಂತರ ಎಷ್ಟು ಕೇಸ್‌ಗಳು ಲೋಕಾಯುಕ್ತದ ಎದುರಿಗೆ ಬಂದಿವೆ ? ಇನ್ನೂ ಅನೇಕ ಜನರು ಲೋಕಾಯುಕ್ತದ ಎದುರಿಗೆ ತಮ್ಮ ಆಸೆಟ್ಸ್ ಅಂಡ್ ಲಯಬಲಿಟೀಸ್ ಸ್ಟೇಟ್‌ಮೆಂಟ್ ಕೊಟ್ಟಿಲ್ಲ. ಸರ್ಕಾರ ಏನು ಪ್ರೊಟೆಕ್ಷನ್ ಜನರಿಗೆ ಮಾಡುತ್ತಿದೆ, ಅದನ್ನು ಮಾಡಲಿಕ್ಕಾಗಿಯೇ ಇರುವುದರಿಂದ ಇನ್ನೂ ಹೆಚ್ಚಿನ ಅಧಿಕಾರ ಏತಕ್ಕೆ ಬೇಕು ಎಂದು ನಾನು ಪ್ರಸ್ತಾಪ ಮಾಡುತ್ತಿದ್ದೇನೆ. ಮುನಿಸಿಪಲ್ ಮಿನಿಸ್ಟರ್ ಚಾರ್ಜ್‌ನಲ್ಲಿರತಕ್ಕಂಥ ಮಾನ್ಯ ಲಕ್ಷ್ಮೀಸಾಗರ್ ಅವರಿಗೆ ಗೊತ್ತಿದೆ. ಅಧಿಕಾರಿ ವರ್ಗದಲ್ಲಿ ಲಂಚಗುಳಿತನ ಯಾವರೀತಿ ಪರಕಾಷ್ಟೆಗೆ ಹೋಗಿದೆ ಎಂಬುದು. ಅವರು ಇತ್ತಕಡೆ ಕುಳಿತಿರತಕ್ಕಂಥ ಸಂದರ್ಭಗಳಲ್ಲಿಯಾಗಲಿ, ಸದನದ ಹೊರಗೆ ಇದ್ದಂಥ ಅನೇಕ ಸಂದರ್ಭಗಳಲ್ಲಿ ಅಧಿಕಾರಸ್ಥರನ್ನು ಸರಿಯಾಗಿ ತರಾಟೆಗೆ ತೆಗೆದು ಕೊಂಡುದು ನೆನಪು ಇದೆ. ಅವರು ಅಧಿಕಾರಕ್ಕೆ ಬಂದಮೇಲೆ ಅದನ್ನೆಲ್ಲ ಮರೆತುಬಿಟ್ಟಿದ್ದಾರೆಂದು ಕಾಣುತ್ತದೆ. ಉದಾಹರಣೆಗೆ ನನ್ನ ಕ್ಷೇತ್ರ ಗದಗ್‌ನಲ್ಲಿ ಮುನಿಸಿಪಾಲಿಟಿಯವರು ಅನೇಕ ಜನರಿಗೆ ವಕ್ಕಲಾತಿಯನ್ನು ಕೊಟ್ಟಿದ್ದಾರೆ. ಸ್ವಾಭಾವಿಕವಾಗಿ ಇದ್ದಂಥ ನಿಯಮಾವಳಿಯೊಳಗೆ ಕೊಟ್ಟು ೨೦ ವರ್ಷಗಳಾದ ಮೇಲೆ ಅದನ್ನು ಬಿಡಿಸಬೇಕೆಂದು ತರಾವು ಆಗಿದೆ. ಮುನಿಸಿಪಾಲಿಟಿ ತರಾವು ಮಾಡಿದ ಹತ್ತು ವರ್ಷದ ಮೇಲೆ ಹೈಕೋರ್ಟಿಗೆ ಯಾರೋ ಒಬ್ಬರು ಹೋಗಿ ರಿಟ್ ಮಾಡಿ ಅದನ್ನು ಸೆಟ್ ಆಸೈಡ್ ಮಾಡಿದ್ದಾರೆ. ಸೆಟ್ ಆಸೈಡ್ ಬಗ್ಗೆ ಹೈಕೋರ್ಟ್‌ನವರು ಇನ್ಸ್‌ಟ್ರಕ್ಷನ್ ಕೊಟ್ಟಿದ್ದಾರೆ. ಗದಗ್ ಮುನಿಸಿಪಾಲಿಟಿ ವಿಶೇಷವಾಗಿ ಅವನತಿಯಲ್ಲಿದ್ದುದರಿಂದ ದುರ್ದೈವದಿಂದ ಸೆಟ್ ಆಸೈಡ್ ಮಿನೀರಿಹೋಗಿ ನೇರವಾಗಿ ಸಹಾಯ ಮಾಡಿ ಎಂದು ಕೋರಿದ್ದರಿಂದ ಸಹಾಯ ಮಾಡಿದ್ದಾರೆ. ಈ ಉಪಕಾರವನ್ನು ನಾನು ನೆನೆಸುತ್ತೇನೆ. ಗದಗ್ ಮುನಿಸಿಪಾಲಿಟಿಗೆ ಕಷ್ಟವಾಗಿದ್ದರೂ ಮುನಿಸಿಪಾಲಿಟಿಗೆ ರೊಕ್ಕ ಕೋಟ್ಯಾಂತರ ರೂಪಾಯಿಗಳ ವರಮಾನವನ್ನು ಈ ಮೂವತ್ತು ವರ್ಷಗಳಿಂದ ಬೆಳೆಸಿ ಕೊಂಡು ಬಂದಿದ್ದಾರೆ. ಪ್ರತಿಯೊಬ್ಬ ವಕ್ಕಲರು ಮಾಲೀಕರಿಂದ ೫೦-೬೦ ಸಾವಿರ ರೂಪಾಯಿಗಳನ್ನು ಕೂಡಿಸಿದೆ. ಕೂಡಿಸಿದ ಹಣ ಪ್ರಭಾವವೋ, ಏತಕ್ಕೆ ಹಣವನ್ನು ಕೂಡಿಸಿದರೆಂದು ಹೇಳಲಿಕ್ಕೆ ಬರುವುದಿಲ್ಲ. ಇದರಿಂದಾಗಿ ಅದು ಮೂವತ್ತು ವರ್ಷಗಳವರೆಗೆ ಬೆಳೆಯಿತು. ಹೈಕೋರ್ಟ್ ತರಾವು ಇದ್ದುದು ಹತ್ತು ವರ್ಷಗಳು ಮಾತ್ರ. ಅದಾದ ನಂತರ ಒಂದೆರಡು ಹೆಚ್ಚುಕಡಿಮೆಯಾಗಿ ಡಿವಿಜನಲ್ ಕಮಿಷನರ್ ಅಪ್ರೂವಲ್‌ಗೆ ಹೋದಾಗ ಡಿವಿಜನಲ್ ಕಮಿಷನರ್ ಹೈಕೋರ್ಟ್ ಆದೇಶದಮೇಲೆ ಇದೇ ಮಾನ್ಯ ಲಕ್ಷ್ಮೀಸಾಗರ್‌ರವರು ಆದೇಶ ಕೊಟ್ಟಿದ್ದಾರೆ. "We have rejected, you take possession" ಎಂದು. ಅವರು ಅಂಗೀಕಾರ ಮಾಡಿದರೋ ಇಲ್ಲವೋ ಆರ್ಡರನ್ನು ಅಂಗೀಕಾರ ಮಾಡಿದರು ಎಂದು ಹೇಗೆ ನಾವೀತು ಮಾಡುತ್ತೀರೆಂದು ಕೇಳುತ್ತೇನೆ. ಗವರ್ನಮೆಂಟ್ ಡೈರೆಕ್ಷನ್, ಹೈಕೋರ್ಟ್ ಡೈರೆಕ್ಷನ್ ಮಿಠಾರಿ ಮಾನ್ಯ ಡಿವಿಜನಲ್ ಕಮಿಷನರ್ ಸಾಹೇಬರು ಅದನ್ನು ಏನು ಮಾಡಿದರು ಎಂದರೆ ಮುನಿಸಿಪಾಲಿಟಿಯು ಮಾಡಿದ್ದು ಯೋಗ್ಯ ಇದೆ ಎಂದು ಅದಕ್ಕೆ ಮೂವತ್ತು ವರ್ಷಗಳು ಮಂಜೂರಾತಿಯನ್ನು ಕೊಡಬೇಕೆಂದು ಬರೆದು ಕಳುಹಿಸಿದರು. ಸುದ್ದಿಪದಿಂದ ಮುನಿಸಿಪಲ್ ಖಾತೆಯವರು ತಮ್ಮದು ತಪ್ಪಾಯಿತು ಎಂದು ಅರಿತು ಅನೇಕ ಜನ ಪ್ರತಿನಿಧಿಗಳು ತಕರಾರು ಮಾಡಿದ್ದರಿಂದ ರಿಜೆಕ್ಟ್ ಮಾಡಿದರು ರಿಜೆಕ್ಟ್ ಮಾಡಿದ ಕಾಪಿಯನ್ನು ನನಗೂ ಕೂಡ ಕಳುಹಿಸಿ ಕೊಟ್ಟಿದ್ದಾರೆ. ಇಲ್ಲಿ ಹಣದ ಸಂಚು ನಡೆದಿದೆ. ಇದನ್ನು ಯಾವರೀತಿ ಲೋಕಾಯುಕ್ತದ ಮುಂದೆ ತರುತ್ತೀರಿ. ಲೋಕಾಯುಕ್ತಕ್ಕೆ ವರದಿ ಮಾಡಿದರೆ ಯಾವರೀತಿ ಸಾಬೀತು ಮಾಡಲಿಕ್ಕೆ ಸಾಧ್ಯವಾಗುತ್ತದೆ. ಓರಲ್ ಎವಿಡೆನ್ಸ್‌ಗೆ ಯಾವರೀತಿ ಮಹತ್ವವನ್ನು ಕೊಡುತ್ತಾರೆ. ಸರ್ಕಾರ ಕಣ್ಣುಮುಚ್ಚಿ ಯಾವ ಅಧಿಕಾರಿ ತಮ್ಮ ಅಧಿಕಾರದ ಕಕ್ಷೆಯನ್ನು ಮೀರಿ, ಹೈಕೋರ್ಟ್ ಆದೇಶವನ್ನು ದೂರೀಕರಿಸಿ, ಗವರ್ನಮೆಂಟ್ ಆರ್ಡರನ್ನು ದೂರೀಕರಿಸಿ ರೆಕಮೆಂಡೇಷನ್ ಮಾಡಿದನೋ ಆ ಅಧಿಕಾರಿ ಇನ್ನೂ ಕೂಡ ಅಲ್ಲಿಯೇ ಉಳಿದಿದ್ದಾನೆ. ಪ್ರಾಮಾಣಿಕ ಅಧಿಕಾರಿ ಶ್ರೀಯುತ ನಾಯಕ್ ಎನ್ನುವಂಥ ತಕ್ಕಂಥ ಸ್ಪೆಷಲ್ ಡೆಪ್ಯುಟಿ ಕಮಿಷನರ್‌ರವರನ್ನು ಯಾರದೋ ಮಾತನ್ನು ಕೇಳಿ ತಪ್ಪು ಇಲ್ಲದಿದ್ದರೂ ಅವರನ್ನು ಸಸ್ಪೆಂಡ್ ಮಾಡಿರತಕ್ಕಂಥದ್ದು ದುರಾದೃಷ್ಟಕರವಾಗಿದೆ. ಸರ್ಕಾರಿ ಅಧಿಕಾರಿಯನ್ನು ಇಬ್ಬರು ಸಾಮಾನ್ಯ ಜನರು ಲಂಚಕೋರ ಎಂದು ಹೇಳಿದರೆ ಮಾನ್ಯ ಲಕ್ಷ್ಮೀಸಾಗರ್‌ರವರು ಯಾವರೀತಿ ಲೋಕಾಯುಕ್ತ ಶೋಧನೆ ಮಾಡುತ್ತದೆಂದು ಹೇಳಿದರೆ ಬಹಳ ಸ್ವಾರಸ್ಯಮಯವಾಗಿರುತ್ತದೆ. ಲಂಚ ನಿರ್ಮೂಲನೆ ಮಾಡುತ್ತೇವೆಂದು ಹೇಳಿ ಭ್ರಷ್ಟಾಚಾರಿಗಳ ನಾನ್ ಆಫಿಷಿಯಲ್‌ಗಳನ್ನೇ ಲೋಕಾಯುಕ್ತಕ್ಕೆ ಹಾಕಿದ್ದಾರೆ. ಇವತ್ತಿನ ದಿವಸ ಸಂಘಸಂಸ್ಥೆಗಳಿಗೆ, ಪಬ್ಲಿಕ್ ಎಂಟರ್‌ಪ್ರೈಸಸ್‌ನಲ್ಲಿದ್ದ ಒಬ್ಬ ಅಧಿಕಾರಸ್ಥರನ್ನೇ ನೇಮಿಸಿದ್ದಾರೆ. ಪಬ್ಲಿಕ್ ಎಂಟರ್‌ಪ್ರೈಸಸ್‌ಗೆ ಅವರನ್ನೇ ಚೇರ್‌ಮನ್ ಮಾಡಿದರೂ ಅತಿಶಯೋಕ್ತಿಯಲ್ಲ. ಸಹಸ್ರಾರು ರೂಪಾಯಿಗಳನ್ನು ಖರ್ಚುಮಾಡಿ ಏನು ಮಾಡಿದರೂ ಹೇಳಲಿಕ್ಕೆ ಬರುತ್ತಿಲ್ಲ. ಇಷ್ಟು ಖರ್ಚು ಮಾಡಿದರೂ ಸಹ ಕಣ್ಣುಮುಚ್ಚಿಕೊಂಡು

ಕುಳಿತಿದ್ದಾರೆ. ಇದನ್ನು ವಿರೋಧಿಸುತ್ತಲೇ ಇದ್ದರೂ ಟೀಕೆಗಳನ್ನು ಮಾಡುತ್ತಿದ್ದರೂ ವಿರೋಧ ಪಕ್ಷದವರು ಒಂದು ರೀತಿ ಹೇಳುತ್ತಿದ್ದಾರೆಂದು ಇದುವರೆವಿಗೂ ಯಾವರೀತಿಯಾದ ಕ್ರಮವನ್ನು ತೆಗೆದುಕೊಂಡಿದ್ದಲ್ಲ. ಭ್ರಷ್ಟಾಚಾರ ನಿರ್ಮೂಲ ಮಾಡುತ್ತೇವೆಂದು ಹೇಳತಕ್ಕ ಸರ್ಕಾರ ಯಾವರೀತಿ ಇದನ್ನು ನಿರ್ಮೂಲ ಮಾಡುತ್ತೀರೆಂದು ಕೇಳಬೇಕಾಗಿದೆ. ಸರ್ಕಾರಕ್ಕೆ ಈಗಿರತಕ್ಕಂಥ ಅಧಿಕಾರದ ಜೊತೆಗೆ ಮತ್ತಷ್ಟು ಅಧಿಕಾರವನ್ನು ಕೊಟ್ಟರೆ ಸರ್ಕಾರ ಸಂಪೂರ್ಣವಾಗಿ ಭ್ರಷ್ಟಾಚಾರಮಯವಾಗುತ್ತದೆಂದು ಹೇಳಲಿಕ್ಕೆ ನಾನು ಇಚ್ಛಿಪಡುತ್ತೇನೆ.

ಸ್ವಾಮಿ, ಇನ್ನು ಅನೇಕ ವಿಷಯಗಳಲ್ಲಿ ಲೋಕಾಯುಕ್ತದವರಿಗೆ ಪೋಲೀಸ್ ಅಧಿಕಾರಿಗಳನ್ನು ಕೊಟ್ಟಿದ್ದೀರಿ. ಪೋಲೀಸ್ ಅಧಿಕಾರಿಗಳಲ್ಲೂ ಲಂಚಕೋರರು ಇದ್ದಾರೆಂದು ಹೇಳುತ್ತಿದ್ದಾರೆ. ಸಬ್‌ಇನ್ಸ್‌ಪೆಕ್ಟರ್, ಇನ್‌ಸ್ಪೆಕ್ಟರ್, ಎಸ್.ಪಿ. ಲಂಚ ತೆಗೆದುಕೊಳ್ಳುವುದನ್ನು ಬಂದ್ ಮಾಡುತ್ತೀರಾ ಹೇಗೆ ಬಂದ್ ಮಾಡಲಿಕ್ಕೆ ಸಾಧ್ಯವಾಗುತ್ತದೆ. ಎಲ್ಲೋ ಸಣ್ಣವರು ತಿಂದರೆ ತಿಂದರು ಎಂದು ಹೇಳುತ್ತಾರೆ. ದೊಡ್ಡವರು ತಿಂದರೆ ಎಲ್ಲಿ ಹೇಳಿರುತ್ತಾರೆ. ಒಂದೆರಡಲ್ಲ ಶುಗರ್ ಫ್ಯಾಕ್ಟರಿ, ಪಬ್ಲಿಕ್ ಎಂಟರ್‌ಪ್ರೈಸಸ್ ಮತ್ತಿತರ ಇನ್‌ಸ್ಟಿಟ್ಯೂಷನ್‌ಗಳನ್ನು ತೆಗೆದುಕೊಂಡರೆ ಅವೆಲ್ಲ ಫೇಲ್ ಆಗಲಿಕ್ಕೆ ಹತ್ತಿವೆ. ಫೇಲ್ ಆಗಿರತಕ್ಕಂಥವುಗಳನ್ನು ಖಾಸಗಿಯವರಿಗೆ ಮಾರೋಣವೆಂದು ಹೇಳುತ್ತಿದ್ದೀರಿ. ಏತಕ್ಕೆ ನಷ್ಟ ಹೊಂದುತ್ತಿದೆ, ಯಾವ ದೋಷದಿಂದ ನಷ್ಟಕ್ಕೆ ಗುರಿಯಾಗುತ್ತಿದೆ ಎಂಬುದನ್ನು ತಾವು ಕಂಡುಹಿಡಿಯಬೇಕು. ಯಾವ ಅಧಿಕಾರಿ ಲಂಚ ತೆಗೆದುಕೊಳ್ಳುತ್ತಿದ್ದಾನೆ ಯಾವ ಅಧಿಕಾರಿ ಅಧ್ಯಕ್ಷತೆಯಿಂದ ಕೆಲಸ ಮಾಡುತ್ತಿದ್ದಾನೆ ಅಂಥವನನ್ನು ಮನೆಗೆ ಕಳುಹಿಸುವ ಕಾರ್ಯ ಯಾವುದನ್ನು ಮಾಡಿದ್ದೀರಿ ? ಪ್ರಾಮಾಣಿಕ ಅಧಿಕಾರಿ ಒಬ್ಬ ಡಿವಿಜನಲ್ ಕಮಿಷನರ್‌ರವರನ್ನು, ಏನೇನು ಅಪರಾಧವಿಲ್ಲದ ಒಬ್ಬ ಮನುಷ್ಯನನ್ನು ಇಲ್ಲದ ಸಲ್ಲದ ಆರೋಪವನ್ನು ಹೊರಿಸಿ ಸಸ್‌ಪೆಂಡ್ ಮಾಡಿಸಿದ್ದಾರೆ. ಇದಕ್ಕೆ ನಿಮಗೆ ಅಧಿಕಾರ ಕೊಡಬೇಕೆ ಎಂದು ನಾನು ಪ್ರಶ್ನೆ ಮಾಡುತ್ತಿದ್ದೇನೆ. ಮಾನ್ಯ ಮುಖ್ಯ ಮಂತ್ರಿಗಳು ಈ ಸಂದರ್ಭದಲ್ಲಿ ಇದ್ದಿದ್ದರೆ ನೆಟ್ಟಗಿರುತ್ತಿತ್ತು. ಮಾನ್ಯ ಲಕ್ಷ್ಮೀ ಸಾಗರ್‌ರವರ ಕಾಂಪಿಟೆನ್ಸ್‌ನ್ನು ನಾನು ಚಾಲೆಂಜ್ ಮಾಡುತ್ತಿಲ್ಲ. ೧೯೭೨ರ ಪೂರ್ವದಲ್ಲಿ ಇದ್ದಂಥ ಕಾಂಪಿಟೆನ್ಸ್‌ನ್ನು ಉಳಿಸಿಕೊಳ್ಳಬೇಕಾಗಿತ್ತು. ಅಧಿಕಾರಕ್ಕೆ ಬರುವುದಕ್ಕೆ ಮುಂಚೆ ಇವರು ಮಹಾ ಸತ್ಯವಂತರು ಎನ್ನುವ ರೀತಿಯಲ್ಲಿ ನಂಬಿದ್ದೆ. ಆದರೆ ಅವರು ಅಧಿಕಾರಕ್ಕೆ ಬಂದ ಮೇಲೆ ಸಿಟ್ಟಿನಿಂದ ಹೇಳುತ್ತಿಲ್ಲ ಅವರ ಸತ್ಯಸಂದತೆ ನಿಜವಾಗಿಯೂ ಜನರಿಗೆ ಮುಟ್ಟಿದಂತಾಗಿದೆ. ಅದನ್ನು ಮುಟ್ಟಿಸುವ ಸ್ಥೂಲ ಪ್ರಯತ್ನ ಮಾಡಬೇಕು.

ಸಹಕಾರಿ ಸಂಘಗಳ ವಿಚಾರದಲ್ಲಿ ಹೇಳಬೇಕಾದರೆ ಮಾನ್ಯ ಜಾಲಪ್ಪನವರು ಲೋಕಾಯುಕ್ತವನ್ನು ಸಹಕಾರಿ ಸಂಘಗಳಿಗೂ ಅನ್ವಯಿಸಬೇಕು. ಏತಕ್ಕೆಂದರೆ ಚೇರ್ಮನ್ ಏನಾದರೂ ಮಾಡಿದರೆ ಅವನನ್ನು ಹಿಡಿದು ಜೈಲಿಗೆ ಹಾಕುತ್ತೀರಿ, ಅದೇ ನಿಮ್ಮ ಅಧಿಕಾರಸ್ಥರು ಇದ್ದರೆ ಬೇಡ ಎಂದರೆ ಕಾಗದ ಪತ್ರಗಳನ್ನು ಬಚ್ಚಿಡುತ್ತೀರಿ. ಇಂಥ ಲಂಚಕೋರರನ್ನು ಏನು ಮಾಡುತ್ತಿದ್ದೀರಿ ? ನಾನು ಹಿಂದಿನ ಸಭೆಯಲ್ಲಿ ಹೇಳಿದ್ದೇನೆ. ಒಬ್ಬ ಆಫೀಸರನ್ನು ಮ್ಯಾನೇಜಿಂಗ್ ಡೈರೆಕ್ಟರ್ ಆಗಿ ಹಾಕಿದ್ದರು. ಅವರು ರೂಲ್ಸ್ ವಯಲೇಟ್ ಮಾಡಿ, ನಿಮ್ಮ ಆ್ಯಕ್ಟ್‌ನ್ನು ವಯಲೇಟ್ ಮಾಡಿ, ಫಾರೀನ್ ಎಕ್ಸ್‌ಚೇಂಜ್ ರೂಲ್ಸ್‌ನ್ನು ವಯಲೇಟ್ ಮಾಡಿ ಲಕ್ಷಾವಧಿ ಹಣ ಖರ್ಚುಮಾಡಿ ತಂದಿದ್ದ ಲ್ಯಾಬೋರೇಟರಿ ಉಪಕರಣಗಳನ್ನು ಐದು-ಹತ್ತು ಸಾವಿರ ರೂಪಾಯಿಗಳಿಗೆ ಮಾರಾಟ ಮಾಡಿದ್ದಾರೆ. ಅಂಥವರ ಮೇಲೆ ಲೋಕಾಯುಕ್ತದಲ್ಲಿ ಯಾವುದೇ ಆ್ಯಕ್ಟ್ ಇಲ್ಲ. ಇವೊತ್ತು ಸಹಕಾರ ಸಂಘಗಳ ಮೇಲೆ ದೂರುಗಳನ್ನು ತರುತ್ತಿದ್ದಾರೆ. ಸಹಕಾರ ಸಂಘಗಳು ಬೆಳವಣಿಗೆ ಕಾಣಲು ಸಾಧ್ಯವಾಗುತ್ತಿಲ್ಲ. ನೀವು ಈ ಆ್ಯಕ್ಟ್‌ನ್ನು ಸಹಕಾರ ಸಂಘಗಳಿಗೂ ಹಚ್ಚಿದ್ದರೆ ಹೆಚ್ಚಿನ ಉತ್ತೇಜನ ಬರುತ್ತಿತ್ತು. ಸಹಕಾರ ಸಂಘ ಚಳುವಳಿ ನಿಜವಾಗಿಯೂ ಈ ದೇಶದಲ್ಲಿ ಮಹತ್ವವಾದ ಲೀಡರ್‌ಗಳನ್ನು ತಯಾರು ಮಾಡತಕ್ಕಂಥ ಚಳುವಳಿ. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ ಈ ಅಧಿಕಾರಿಗಳು ಮೂವತ್ತು ವರ್ಷಗಳ ವರೆಗೆ ಕೆಲಸ ಮಾಡಿ ಪಾರಾಗಿ ಹೋಗುತ್ತಾರೆ. ಯಾರು ಯಾರು ಅಧಿಕಾರಿಗಳು ಇದ್ದಾರೆ ಅವರುಗಳು ಸಹಿತ ಇದರಲ್ಲಿ ಜವಾಬ್ದಾರರು ಎಂದು ಹೇಳಬಹುದು. ಆದರೆ ಎಷ್ಟು ಮಂದಿ ಅಧಿಕಾರಿಗಳನ್ನು ಹಿಡಿದು ಅವರನ್ನು ಜವಾಬ್ದಾರರನ್ನಾಗಿ ಮಾಡಿ ಸಸ್ಪೆಂಡ್ ಮಾಡಿದ್ದೀರಿ ? ದೊಡ್ಡ ದೊಡ್ಡ ಫೆಡರೇಷನ್‌ಗಳಲ್ಲಿ ಸಹಿತ ಲಕ್ಷಾನುಗಟ್ಟಲೆ ಅವ್ಯವಹಾರಗಳು ನಡೆದ ಪ್ರಕರಣಗಳು ಇವೆ. ಮ್ಯಾನೇಜಿಂಗ್ ಡೈರೆಕ್ಟರುಗಳು ನೇರವಾಗಿ ಸಂಬಂಧವಿದ್ದರೂ, ಅವರನ್ನು ಪರಿಗಣನೆಗೆ ತೆಗೆದುಕೊಳ್ಳದೆ ಕಮಿಟಿಯ ಮೆಂಬರನ್ನು ಮಾತ್ರ ಈ ಆ್ಯಕ್ಟ್‌ಗೆ ಗುರಿ ಮಾಡಿದ್ದೀರಿ. ನಾನು ಹೇಳುವುದು ಏನೆಂದರೆ ಕುರಿ ಕೊಲ್ಲುವುದಕ್ಕೆ ಈ ಆ್ಯಕ್ಟ್ ಇದೆಯೇ ಹೊರತು ತೋಳವನ್ನು ಕೊಲ್ಲುವುದಕ್ಕಲ್ಲ.

ಇದರಿಂದ ತೊಂದರೆಯನ್ನು ಹೊಲ್ಲುವುದಕ್ಕೆ ಉಪಯೋಗವಾಗುವುದಿಲ್ಲವೆಂದು ನಾನು ಹೇಳುತ್ತೇನೆ. ಮಾನ್ಯ ಲಕ್ಷ್ಮೀಸಾಗರಯ್ಯನವರು ತಂದಿರುವ ಈ ಆಕ್ಟ್‌ನ್ನು ನಾನೇನೂ ವಿರೋಧ ಮಾಡುವುದಿಲ್ಲ. ಇದಕ್ಕಿಂತ ಉಗ್ರವಾದ ಶಿಕ್ಷೆಯನ್ನು ಕೊಡಲಿ. ಇದರ ಜೊತೆಗೆ ಇಪತ್ತು ಒಬ್ಬ ಮಂತ್ರಿ ತಮ್ಮ ಖಾತೆಯನ್ನು ಬಿಟ್ಟು ಮತ್ತೊಂದು ಖಾತೆಗೆ ಹೋಗುತ್ತಾರೆ. ಇಲ್ಲದ ಕೆಲಸಗಳನ್ನು ಮಾಡುತ್ತಿದ್ದಾರೆ, ಕರಪ್‌ಷನ್ ಆತಿಯಾಗುತ್ತಿದೆ ಎಂದು ನಾವು ಹೇಳಿದ ಕೂಡಲೇ ಮಾನ್ಯ ಮುಖ್ಯಮಂತ್ರಿಗಳು ಬಹಳ ಜಾಣರು. ನಾವು ಎದ್ದು ನಿಂತ ಕೂಡಲೇ ''ಪಾಟೀಲರೇ, ಇವತ್ತಿನ ದಿವಸ ಲೋಕಾಯುಕ್ತ ಇದೆ. ನೀವು ಬೇಕಾದಂತೆ ರೆಫರ್ ಮಾಡಬಹುದು'' ಎಂದು ಹೇಳುತ್ತಾರೆ. ನಮಗೆ ಬೇರೆ ಏನೂ ಕೆಲಸ ಇಲ್ಲದೇ ಇದ್ದಿದ್ದರೆ ಈ ಕೆಲಸ ಮಾಡಬಹುದಾಗಿತ್ತು. ಎಂ.ಎಲ್.ಎ. ಮತ್ತು ಲೋಕಾಯುಕ್ತ ಎಂ.ಎಲ್.ಎ ಮತ್ತು ಲೋಕಾಯುಕ್ತ ಎಂದು ಓಡಾಡಬಹುದಿತ್ತು. ಆದರೆ ನಮಗೆ ಬಹಳ ಕೆಲಸ ಇದೆ. ನಮಗೆ ಆನ್ನಿಸಿದ್ದನ್ನು ಇಲ್ಲಿ ಹೇಳುತ್ತೇವೆ. ಕಣ್ಣು ಮುಂದೆಯೇ ಕಳ್ಳರಿದ್ದಾರೆ, ಬೇಕಾದರೆ ಹಿಡಿಯುರಿ ಇಲ್ಲದಿದ್ದರೆ ಬಿಡಿರಿ. ಈ ಲೋಕಾಯುಕ್ತವನ್ನು ನಿಜವಾಗಿಯೂ ಉಪಯೋಗ ಮಾಡಿಕೊಳ್ಳಬೇಕಾದರೆ ಈ ಲೋಕಾಯುಕ್ತದ ಸದುಪಯೋಗ ಜನರಿಗೆ ಆಗಬೇಕಾದರೆ, ಕರ್ನಾಟಕ ರಾಜ್ಯದಲ್ಲಿ ಒಂದು ಪಾದರಿ ರಾಜ್ಯವನ್ನು ಸ್ಥಾಪನೆ ಮಾಡಬೇಕಾದರೆ ಈಗ ಇರತಕ್ಕಂಥ ಈ ತಿದ್ದುಪಡಿಯಿಂದ ಸಾಲದು. ಇದಕ್ಕಿಂತ ಹೆಚ್ಚಿನ ತಿದ್ದುಪಡಿಯ ಅವಶ್ಯಕತೆ ಇದೆ. ತಾವು ವಿರೋಧಪಕ್ಷವನ್ನು ಗಣನೆಗೆ ತೆಗೆದುಕೊಂಡು, ಆಪರನ್ನೂ ವಿಚಾರಕ್ಕೆ ತೆಗೆದುಕೊಂಡು ನಮ್ಮೆಲ್ಲರ ಸಮ್ಮತಿಯಿಂದ ಇದನ್ನು ತಂದಿದ್ದರೆ ಇದಕ್ಕೆ ಹೆಚ್ಚು ಭೂಷಣ ಆಗುತ್ತಿತ್ತು. ಈ ಮಾತನ್ನು ನಾನು ಹೇಳುತ್ತಾ ಅನಿವಾರ್ಯವಾಗಿ ಈ ತಿದ್ದುಪಡಿಯನ್ನು ವಿರೋಧ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಎಸ್. ಯೂಡಿಯೂರಪ್ಪ (ಶಿಕಾರಿಪುರ).—ಸನ್ಮಾನ್ಯ ಅಧ್ಯಕ್ಷರೇ, ಈ ಕರ್ನಾಟಕ ಲೋಕಾಯುಕ್ತ ತಿದ್ದುಪಡಿ ವಿಧೇಯಕವನ್ನು ಇಲ್ಲಿ ತಂದಿದ್ದಾರೆ. ಇದರ ಬಗ್ಗೆ ಒಂದೆರಡು ಸಂಗತಿಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮೊದಲನೆಯದಾಗಿ ಈ ಲೋಕಾಯುಕ್ತದಲ್ಲಿ ನಾವು ಫಿರ್ಯಾದನ್ನು ಕೊಟ್ಟು ಆಲ್ಲಿ ಅದು ಏನಾದರೂ ತೀರ್ಮಾನಕ್ಕೆ ಬಂದರೆ, ಈ ತೀರ್ಮಾನದ ವಿರುದ್ಧ ಹೈಕೋರ್ಟಿಗಾಗಲೀ, ಅಥವಾ ಬೇರೆ ಕೋರ್ಟಿಗಾಗಲೀ ಹೋಗಬಾರದು ಎನ್ನುವುದೇನಾದರೂ ರೂಲ್ಸ್ ಇದೆಯಲ್ಲಿ ಇದೆಯೇ ?

ಶ್ರೀ ಎ. ಲಕ್ಷ್ಮೀಸಾಗರ್.—ಈ ತರಹ ಕಾನೂನು ಮಾಡುವುದಕ್ಕೆ ಆಗುವುದಿಲ್ಲ. ಈ ದೇಶದಲ್ಲಿ ಈ ಕಾನೂನು ಮಾಡುವುದಕ್ಕೆ ಬರುವುದಿಲ್ಲ. ಸಂವಿಧಾನದಲ್ಲಿ ಎಲ್ಲಿಯವರೆಗೆ ೨೨೬ನೇ ಆರ್ಟ್ ಇರುತ್ತದೆ, ಅಲ್ಲಿಯವರೆಗೆ ಎಲ್ಲಿಯೂ ಹೋಗಬೇಡಿರಿ, ಇದೇ ಕೊನೆಯ ತೀರ್ಮಾನವೆಂದು ಹೇಳುವುದಕ್ಕೆ ಬರುವುದಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಹೀಗಿರುವಾಗ ಈ ಲೋಕಾಯುಕ್ತದಲ್ಲಿ ಆಳವಡಿಸಿರುವಂಥ ಮುಖ್ಯಮಂತ್ರಿಗಳು, ಮಂತ್ರಿಗಳು, ಶಾಸಕರು ಮತ್ತು ಯಾರಕೈಗೂಸಿಗದ ಅಧಿಕಾರಿಗಳು ಇವರಗುಂಪು ಏನಿನೆ ಅದು ಸ್ವಾತಂತ್ರ್ಯ ಬಂದು ಇಷ್ಟು ವರ್ಷಗಳಾದವು, ಆದರೂ ಇವರು ಒಂದಲ್ಲ ಒಂದು ಕಾರಣ ದಿಂದ ತಪ್ಪಿಸಿಕೊಂಡು ಓಡಾಟ ಮಾಡುತ್ತಿದ್ದಾರೆ. ಮಾಡಬಾರದ್ದನ್ನು ಮಾಡುತ್ತಿದ್ದಾರೆ ಎಂದು ಜನ ಅಂದುಕೊಂಡಿದ್ದಾರೆ. ಇಂತಹ ವ್ಯಕ್ತಿಗಳ ಬಗ್ಗೆ ಕಡಿವಾಣ ಹಾಕುವ ಉದ್ದೇಶದಿಂದ ಈ ಮಸೂದೆಯನ್ನು, ಲೋಕಾಯುಕ್ತ ಪದ್ಧತಿಯನ್ನು ಜಾರಿಗೆ ತಂದಿದ್ದೇವೆ. ನಾನು ಮಾನ್ಯ ಮಂತ್ರಿಯವರಲ್ಲಿ ಕೇಳುವುದು ಇಷ್ಟೆ. ಈ ರೀತಿ ಲೋಕಾಯುಕ್ತವನ್ನು ಈಗಾಗಲೇ ನಾವು ಒಪ್ಪಿಕೊಂಡಿದ್ದೇವೆ ಮತ್ತು ಇದೀಗ ಇಲ್ಲಿ ತಿದ್ದುಪಡಿಯನ್ನು ತರುತ್ತಿದ್ದೇವೆ. ಬೇರೆ ಬೇರೆ ರಾಜ್ಯಗಳಲ್ಲಿ ಈ ವ್ಯವಸ್ಥೆ ಇದೆ. ಇದರ ಮಾಹಿತಿಯನ್ನು ಎಷ್ಟು ಜನ ಮಂತ್ರಿಗಳು, ಮುಖ್ಯಮಂತ್ರಿಗಳು, ರಾಜಕಾರಣಿಗಳು ಮತ್ತು ಅಧಿಕಾರಿಗಳ ಮೇಲೆ ಕ್ರಮವನ್ನು ತೆಗೆದುಕೊಂಡು ಸರಿಯಾದಂಥ ಆರೋಪವನ್ನು ಹೊರಿಸಿ ಕ್ರಮ ತೆಗೆದುಕೊಂಡ ಉದಾಹರಣೆ ಇದೆ ? ಏಕೆ ನಾನು ಇದನ್ನು ಪ್ರಾರಂಭದಲ್ಲೇ ಹೇಳುತ್ತಿದ್ದೇನೆ ಎಂದರೆ, ಹೊಸ ಹೊಸ ಹೆಸರುಗಳನ್ನು ಹೇಳಿಕೊಂಡು ಹೊಸ ಹೊಸ ಕಾನೂನು ಮಾಡಬೇಕೆಂದು, ಕಾನೂನನ್ನು ಬದಲಾವಣೆ ಮಾಡುವುದರಿಂದ, ಅಧಿಕಾರವನ್ನು ಬೇರೆಯವರಿಗೆ ಕೊಟ್ಟು ಲೋಕಾಯುಕ್ತದ ಹೆಸರು ಇಡುವುದರಿಂದ ಸಮಸ್ಯೆ ಬಗೆಹರಿಯುವುದಿಲ್ಲ. ಈ ರಾಜ್ಯದ ಜನತೆಯಿಂದ ಗೆದ್ದುಬಂದಂಥ ಪ್ರತಿನಿಧಿಯೊಬ್ಬರು, ನಾನು ಅವರ ಹೆಸರನ್ನು ಪ್ರಸ್ತಾಪ ಮಾಡುವುದಕ್ಕೆ ಬಯಸುವುದಿಲ್ಲ. ಮಾನ್ಯ ಮುಖ್ಯಮಂತ್ರಿಯವರಿಗೆ ಸಂಬಂಧಪಟ್ಟ ಸ್ವಜನರ ಬಗ್ಗೆ ಸಾಕಷ್ಟು ಪುರಾವೆಗಳನ್ನು ಇಟ್ಟುಕೊಂಡು ಲೋಕಾಯುಕ್ತಕ್ಕೆ ಹೋಗಿದ್ದರು. ಮಾನ್ಯ ಸುಬ್ಬಯ್ಯನವರು ಲೋಕಾಯುಕ್ತಕ್ಕೆ ಹೋಗಿದ್ದರು. ಆದರೆ ಅಲ್ಲಿ ಅವರಿಗೆ ಅವಕಾಶ ಆಗಲಿಲ್ಲ.

ಅಧ್ಯಕ್ಷರು.—ತಾವು ಆಕ್ಟ್ ಬಗ್ಗೆ ಮಾತ್ರ ಹೇಳಿ ಮುಗಿಸಿ.

† ಶ್ರೀ ಬಿ. ಎಸ್. ಯಡಿಯೂರಪ್ಪ.—ಅಲ್ಲಿ ಅವರಿಗೆ ಅವಕಾಶ ಆಗಲಿಲ್ಲ. ಹೈಕೋರ್ಟಿನಲ್ಲಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಆಯಿತು. ಹಾಗಿದ್ದರೆ ಈ ಒಂದು ಹೊಸ ವ್ಯವಸ್ಥೆಯಿಂದ ಏನು ಅನುಕೂಲ ಆಗುತ್ತದೆ ? ಈಗ ಇರತಕ್ಕಂಥ ತಿದ್ದುಪಡಿ ಏನಿದೆ, ಲೋಕಾಯುಕ್ತರು ಪೋಲೀಸರ ಮುಖಾಂತರ ಶೋಧನೆ ಮಾಡಿಸತಕ್ಕ ಅಧಿಕಾರವನ್ನು ಕೊಟ್ಟಿದ್ದಾರೆ. ಈಗ ಇರತಕ್ಕಂಥ ಪೋಲೀಸ್ ವ್ಯವಸ್ಥೆಯನ್ನೇ ಇಟ್ಟುಕೊಂಡು, ಲೋಕಾಯುಕ್ತಕ್ಕೆ ಆರೋಪ ಬಂದರೆ, ಒಬ್ಬ ಪೋಲೀಸ್ ಅಧಿಕಾರಿಯನ್ನು ತೆಗೆದುಕೊಂಡು ಹೋಗಿ ಮಂತ್ರಿಗಳ ಮನೆಗೆ, ಶಾಸಕರ ಮನೆಯಲ್ಲಿ ಶೋಧನೆ ಮಾಡಿ ಎಂದು ಹೇಳಿದಾಗ, ಆ ವ್ಯಕ್ತಿ ಎಷ್ಟರಮಟ್ಟಿಗೆ ಶೋಧನೆ ಮಾಡಿ ನಿಜವಾದ ಪರಿಸ್ಥಿತಿಯನ್ನು ಹೇಳುವಂಥ ವ್ಯವಸ್ಥೆ ಇದೆ ಈ ಪ್ರಜಾಪ್ರಭುತ್ವ ಪರಿಸ್ಥಿತಿಯಲ್ಲಿ ? ಅಂದರೆ ಇದೆಲ್ಲಾ ಕೇವಲ ಹೊಸ ಹೊಸ ವ್ಯವಸ್ಥೆಯೆಂದು ಹೇಳಿಕೊಂಡು, ತಿದ್ದುಪಡಿ ಮಾಡಿಕೊಂಡು ಬಿಗಿ ವ್ಯವಸ್ಥೆಯೆಂದು ಹೇಳುವುದಕ್ಕಾಗುವುದಿಲ್ಲ. ಇದರ ಅಗತ್ಯವಿಲ್ಲವೆಂದು ನಾನು ಹೇಳುತ್ತಿಲ್ಲ. ಅಗತ್ಯ ಇರುವುದಾದರೆ ಈಗಿರುವ ವ್ಯವಸ್ಥೆಯನ್ನು ತಪ್ಪಿಸಿ, ಪೋಲೀಸರಿಂದ ಸಿ.ಓ.ಡಿ. ತನಿಖೆ ಮಾಡಿಸಿದ ಅನುಭವ ನಮಗಿದೆ. ಇದೇ ಅಧಿಕಾರಿಗಳನ್ನು ಉಪಯೋಗ ಮಾಡಿಕೊಳ್ಳುವ ಅಗತ್ಯ ಇಲ್ಲ. ಬೇರೆ ಹೊಸ ವ್ಯವಸ್ಥೆಯನ್ನು ಮಾಡಿ. ತನಿಖೆ ಮಾಡುವ ವ್ಯಕ್ತಿಗೂ ಸರ್ಕಾರಕ್ಕೂ ಯಾವ ಸಂಬಂಧವೂ ಇರಬಾರದು. ಸರ್ಕಾರಕ್ಕೂ ಈ ವ್ಯವಸ್ಥೆಗೂ ಯಾವುದೇ ನೇರವಾದ ಸಂಬಂಧ ಇರಬಾರದು. ಇವರಿಗೇ ನೇರವಾದ ಅಧಿಕಾರ ಇರಬೇಕು. ಇಂತಹ ಒಂದು ಹೊಸದಾದ ವ್ಯವಸ್ಥೆಯನ್ನು ತಂದಾಗ ಮಾತ್ರ ನಿಜವಾಗಿಯೂ ಈ ತಿದ್ದುಪಡಿಯನ್ನು ಪರಿಣಾಮಕಾರಿಯಾಗಿ ಉಪಯೋಗಿಸುವುದಕ್ಕೆ ಸಾಧ್ಯವಾಗುತ್ತದೆ. ಎರಡನೆಯದಾಗಿ ಸುಳ್ಳು ಫಿರ್ಯಾದು ಕೊಟ್ಟ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳುವುದು. ಅನ್ಯಾಯವೆಂದು ಕಂಡುಬಂದಾಗ ಪುರಾವೆಗಳನ್ನು ಒದಗಿಸಿಕೊಟ್ಟು ಲೋಕಾಯುಕ್ತಕ್ಕೆ ದೂರು ನೀಡಿದಾಗ, ಅದನ್ನು ಲೋಕಾಯುಕ್ತ ಅಡ್ಮಿಟ್ ಮಾಡತಕ್ಕಂಥ ಸಂದರ್ಭದಲ್ಲಿ ತನಿಖೆ ಮಾಡಿಸಿ ಆರೋಪ ಸರಿಯಿಲ್ಲವೆಂದು ಕಂಡುಬಂದರೆ ಫಿರ್ಯಾದು ನೀಡಿದವರನ್ನು ವಿಚಾರ ಮಾಡಲಿಕ್ಕೆ ಇಲ್ಲಿ ಅವಕಾಶ ಇದೆ. ಈ ತಿದ್ದುಪಡಿಯಿಂದ ಬಹುಶಃ ನನಗನ್ನಿಸುತ್ತದೆ ಏನೆಂದರೆ, ಮುಂದೆ ಬರುವಂಥ ದಿವಸಗಳಲ್ಲಿ ಯಾವುದೇ ಒಬ್ಬ ವ್ಯಕ್ತಿ ಈ ರೀತಿಯಾಗಿ ನೇರವಾಗಿ ಸತ್ಯ ಘಟನೆಗಳು, ಪುರಾವೆಗಳು ಇದ್ದರೂ ಸಹಿತ ರಿಸ್ಕ್ ತೆಗೆದುಕೊಳ್ಳುವುದಕ್ಕೆ ಆತ ಮುಂದೆ ಬರುವುದಿಲ್ಲ. ಈ ಆರೋಪ ಮಾಡತಕ್ಕಂಥ ವ್ಯಕ್ತಿಯ ಕೈ ಬಿಗಿಮಾಡಿ ಆತ ಹತ್ತಿರ ಬರಬಾರದು ಎನ್ನುವ ಉದ್ದೇಶ ಇರಬಹುದು ಈ ತಿದ್ದುಪಡಿಯಲ್ಲಿ. ಇದಕ್ಕಾಗಿ ನಾನು ಹೇಳುವುದೇನೆಂದರೆ ''ಸುಳ್ಳು ಫಿರ್ಯಾದು ಮಾಡಿದವರ ಮೇಲೆ ಸಂಬಂಧಪಟ್ಟ ವ್ಯಕ್ತಿಗೆ ನ್ಯಾಯಾಲಯದಲ್ಲಿ ಅಭಿಯೋಗ ನಡೆಸಲು ಪರವಾನಗಿಯನ್ನು ಕೊಡುವುದು' —ಮಸೂದೆಯ ಕಲಂ ೧೧ ಏನಿದೆ, ಇದಕ್ಕೆ ತಿದ್ದುಪಡಿ ತರುವ ಪ್ರಯತ್ನ ಏನಿದೆ ಇದನ್ನು ಕೈಬಿಡಬೇಕು. ದಯಮಾಡಿ ಯಾವ ಒಳ್ಳೆಯ ಉದ್ದೇಶವನ್ನು ಇಟ್ಟುಕೊಂಡು ಈ ಲೋಕಾಯುಕ್ತವನ್ನು ತಂದಿರೋ, ಅದರ ಕೈಗಳನ್ನು ಸಡಿಲಗೊಳಿಸಿ ಸ್ವತಂತ್ರವಾಗಿ ಕೆಲಸ ಮಾಡಲಿಕ್ಕೆ ಸಾಧ್ಯತೆ ಮಾಡಿಕೊಡಿ. ಆದ್ದರಿಂದ ಪೋಲೀಸರ ಮುಖಾಂತರ ತನಿಖೆ ಮಾಡಿಸುವುದು, ಈ ತಿದ್ದುಪಡಿಯಲ್ಲಿ ಸೂಚಿಸಿರುವಂತೆ ಸುಳ್ಳು ಫಿರ್ಯಾದು ಮಾಡುವಂಥ ವ್ಯಕ್ತಿಗಳ ಮೇಲೆ, ಅದು ಅಸತ್ಯವೆಂದು ಕಂಡುಬಂದಾಗ ಆತನ ಮೇಲೆ ವಿಚಾರಣೆ ಮಾಡಲು ಪರವಾನಗಿ ಕೊಡುವ ಪ್ರಯತ್ನ ಇಲ್ಲಿದೆ. ನಾನು ಹೇಳುತ್ತೇನೆ ಯಾವ ಒಬ್ಬ ವ್ಯಕ್ತಿ ಲೋಕಾಯುಕ್ತದ ಮುಂದೆ ಹೋಗಿ ಅನ್ಯಾಯವಾಗಿದೆ, ಕಣ್ಣುಮುಂದೆ ಅನ್ಯಾಯ ನಡೆಯುತ್ತಿದೆ, ಎಂದು ಪ್ರಭಲರಾದ ಅಧಿಕಾರಿಗಳ ಬಗ್ಗೆ, ಮಂತ್ರಿಗಳ ಬಗ್ಗೆ ಹೇಳಿದಾಗ, ಅದಕ್ಕೆ ಅವಕಾಶ ಕೊಡದೆ ನೋಟೀಸ್ ಇಲ್ಲದೇ ಅದನ್ನು ತಳ್ಳಿಹಾಕಿದಾಗ ಹೈಕೋರ್ಟಿಗೆ ತೆಗೆದುಕೊಂಡು ಹೋಗಬೇಕಾದರೆ, ಅದು ಅಲ್ಲಿ ಅಡ್ಮಿಟ್ ಆಗುತ್ತದೆ. ಆದ್ದರಿಂದ ಇದನ್ನು ವಿಷದವಾಗಿ ಯೋಚನೆ ಮಾಡಿ ಈಗ ತಂದಿರುವ ತಿದ್ದುಪಡಿಗಳನ್ನು ಕೈಬಿಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

೨-೩೦ ಪಿ. ಎಂ.

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಕೃಷ್ಣನ್ ಅವರು ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅದೇ ರೀತಿಯಲ್ಲಿ ಮಾನ್ಯ ವೆಂಕಟರಾಮಯ್ಯನವರು, ಶ್ರೀ ಕೆ.ಹೆಚ್ ಪಾಟೀಲ್ ಅವರು ಮತ್ತು ಶ್ರೀ ಯಡಿಯೂರಪ್ಪನವರು ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಇದಕ್ಕೆಲ್ಲಾ ನಾನು ಬಹಳ ಉದ್ದವಾಗಿ ಉತ್ತರ ಕೊಡುವುದಕ್ಕೆ ಹೋಗುವುದಿಲ್ಲ. ನಾನು ಬಹಳ ಕ್ಲುಪ್ತವಾಗಿ ಉತ್ತರಕೊಡುತ್ತೇನೆ. ಸರ್ಕಾರಕ್ಕೆ ಯಾವುದಾದರೂ ದೂರು ಬಂದಾಗ ಅದನ್ನು ಲೋಕಾಯುಕ್ತರಿಗೆ ಕಳುಹಿಸಿಕೊಡುವ ಸಂದರ್ಭದಲ್ಲಿ ಅದನ್ನು ಪರಿಶೀಲನೆ ಮಾಡುವಂಥ ಅಧಿಕಾರವನ್ನು ರಾಜ್ಯ ಸರ್ಕಾರಕ್ಕೆ ಈ ತಿದ್ದುಪಡಿ ಮೂಲಕ ಕೊಡಲಾಗುತ್ತದೆ ಈ ತಿದ್ದುಪಡಿ ಮಸೂದೆಯನ್ನು ಆಂಗ್ಲಭಾಷೆಯಲ್ಲಿ ಸಹ ತಯಾರಿಸಿ ಸದಸ್ಯರಿಗೆ ಕೊಡಬೇಕಾಗಿತ್ತು ಎಂದು ಸಲಹೆ ಮಾಡಿದ್ದಾರೆ. ಮುಂದಿನ ಸಲ ಇಂತಹ ಸಂದರ್ಭಗಳು ಬಂದಾಗ ಕನ್ನಡದ ಜೊತೆಗೆ ಆಂಗ್ಲಭಾಷೆಯಲ್ಲಿ ಸಹ ಅದನ್ನು ತರ್ಜುಮೆ ಮಾಡಿಕೊಡುತ್ತೇವೆಂದು ಹೇಳುತ್ತೇನೆ, ಮಾನ್ಯ ವೆಂಕಟರಾಮಯ್ಯನವರು, ಮಾನ್ಯ ಕೃಷ್ಣನ್ ಅವರು ಮತ್ತು ಮಾನ್ಯ ಯಡಿಯೂರಪ್ಪನವರು, ಪೋಲೀಸ್ ಠಾಣಾಂತರ ಶೋಧನೆ ನಡೆಸುವ ಬಗ್ಗೆ ಮಾತನಾಡಿದ್ದಾರೆ. ಈಗಾಗಲೇ ಕ್ರಿಮಿನಲ್ ಪ್ರೊಸೀಜರ್ ಕೋಡ್‌ನಲ್ಲಿ ಹಾಗೂ ಆರ್ಡಿನರಿ ಕ್ರಿಮಿನಲ್ ಲಾ ನಲ್ಲಿ ಶೋಧನೆ ನಡೆಸಲು ಅಧಿಕಾರ ಇದೆ. ಅದರ ಜೊತೆಗೆ ಈ ಒಂದು ತಿದ್ದುಪಡಿಯನ್ನು ಸಹ ಇಲ್ಲಿ ತಂದಿದ್ದೇವೆ. ಈ ತಿದ್ದುಪಡಿಯನ್ನು ಮಾಡಿರುವುದರ ಉದ್ದೇಶವಾದರೂ ಇಷ್ಟೆ, ಪೋಲೀಸರು ಒಂದು ಮನೆಗೆ ಹೋಗಿ ಅಲ್ಲಿನ ಚರ ಮತ್ತು ಸ್ಥಿರ ಆಸ್ತಿಗಳನ್ನು ಶೋಧನೆ ಮಾಡಲು ಹೊರಟಾಗ, ಆ ಮನೆಯ ಯಜಮಾನ ಕೆಲವು ಒಡವೆಗಳನ್ನು ತನ್ನ ಜೇಬಿನಲ್ಲಿಟ್ಟುಕೊಂಡಿದ್ದರೆ, ಅವರ ಜೇಬುಗಳನ್ನು ತನಿಖೆ ಮಾಡಲು ಈಗ ಅಧಿಕಾರ ಇಲ್ಲವಾಗಿದೆ. ಇದೇ ಕಾರಣ ಕೊಟ್ಟು ತಮ್ಮನ್ನು ಮುಟ್ಟಲು ನಿಮಗೆ ಅಧಿಕಾರ ಇಲ್ಲ ಎಂದು ಅವರು ಪೋಲೀಸರಿಗೆ ಹೇಳಬಹುದು, ಇದನ್ನು ತಪ್ಪಿಸುವುದಕ್ಕಾಗಿಯೇ ಈ ತಿದ್ದುಪಡಿಯನ್ನು ತಂದಿರುವುದು. ಮಾನ್ಯ ವೆಂಕಟರಾಮಯ್ಯನವರು ಇವರಿಂದ ಅಧಿಕಾರ ದುರುಪಯೋಗವಾಗುತ್ತದೆಂದು ಹೇಳಿದರು. ಅಧಿಕಾರವಿಲ್ಲದೆ ಯಾವ ಕೆಲಸವೂ ಆಗುವುದಿಲ್ಲ. law is Power. It confers power and power is a double edged weapon. It depends upon the user and also the the circumstances under which it is used. Every action of the Government is brought before this House and we are subject to correction, criticim and all kinds of talks both inside the House. This is the only guarantee in a democracy. Therefore, you can not say, " power shall not be given". Where is the other way of exercising power ? ಈ ಒಂದು ಕೀಮಾರೇಖೆಯನ್ನು ಮಾನ್ಯ ಸದಸ್ಯರು ಗಣನೆಗೆ ತೆಗೆದುಕೊಳ್ಳಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮತ್ತೆ ಲೋಕಾಯುಕ್ತರಿಗೆ ವಿವೇಚನಾಧಿಕಾರವನ್ನು ಕೊಡಬಾರದೆಂದು ಹೇಳಿದ್ದಾರೆ. ಈಗ ಈ ಮನೆಯ ಅಧ್ಯಕ್ಷರಿದ್ದಾರೆ. ಅವರ ಆಡಳಿತೆಯಲ್ಲಿ ಕೆಲಸ ಮಾಡುತ್ತಿರುವವರು ಏನಾದರೂ ತಪ್ಪು ಮಾಡಿದಾಗ ಅವರ ಮೇಲೆ ಕ್ರಮ ತೆಗೆದುಕೊಳ್ಳಲು ಅಧಿಕಾರ ಇಲ್ಲದಿದ್ದರೆ ಇವರು ತಮ್ಮ ಅಧಿಕಾರವನ್ನು ಚಲಾಯಿಸಲು ಯಾವ ರೀತಿಯಿಂದಲೂ ಸಾಧ್ಯವಾಗುವುದಿಲ್ಲ. ಆದ್ದರಿಂದ ಇಲ್ಲಿ ಲೋಕಾಯುಕ್ತರಿಗೂ ಸಹ ಈಗಿರುವ ಕಾನೂನಿನ ಸೂತ್ರದ ಅಡಿಯಲ್ಲಿ ತಮ್ಮ ಅಧಿಕಾರ ಚಲಾಯಿಸಲು ಕೆಲವೊಂದು ಅಧಿಕಾರಗಳನ್ನು ಕೊಟ್ಟಿದ್ದೇವೆ. ಇದು ಹೊಸದೇನೂ ಅಲ್ಲ. ಮಾನ್ಯ ಸದಸ್ಯರು ಹೇಳಿದಂತೆ ಇದರಲ್ಲಿ ಡೈರೂಟ್ ಮಾಡುವಂಥ ವಿಚಾರಗಳೂ ಯಾವುದೂ ಇಲ್ಲ. ಇರುವಂಥಹ ದೋಷಗಳನ್ನು ತಿದ್ದುವುದಕ್ಕೆ ಇದರಲ್ಲಿ ಅವಕಾಶ ಕಲ್ಪಿಸಲಾಗಿದೆ. ಮಾನ್ಯ ಕೆ.ಹೆಚ್. ಪಾಟೀಲ್ ಅವರು ಮನನೊಂದುಕೊಂಡು ಕೆಲವು ವಿಚಾರಗಳನ್ನು ಹೇಳಿದರು. ಈಗ ನಮ್ಮ ದೇಶದಲ್ಲಿ ಎಷ್ಟೋ ಕಾನೂನುಗಳು ಇವೆ. ಆದರೆ ಅದರ ಪ್ರಕಾರ ನಡೆದುಕೊಳ್ಳುವವರು ಕಡಿಮೆ. ದುರ್ದೈವದ ಸಂಗತಿ ಎಂದರೆ ನಮ್ಮ ದೇಶದಲ್ಲಿ ಬಾಯಿ ಮಾತಿನಲ್ಲಿಯೇ ದೂರುವಂತಹ ಜನರು ಜಾಸ್ತಿ ಇದ್ದಾರೆ. ನಾವು ಯಾವ ಹುತದಲ್ಲಿಯೇ ತೆಗೆದುಕೊಂಡರೂ ಸಹ, ವ್ಯಕ್ತಿಗತವಾಗಿ ಇಲ್ಲವೇ ಸರ್ಕಾರದ ಮೇಲೆ ದೋಷಾರೋಪಣೆ ಮಾಡುತ್ತಾರೆ ಇದು ಪುಂಖಾನು ಪುಂಖವಾಗಿ ನಡೆಯುತ್ತದೆ. ಬಸ್ಸ್ಟಾಂಡ್‌ನಲ್ಲಿ, ಹೋಟಲ್‌ಗಳಲ್ಲಿ, ಸೇವಿಂಗ್-ಸೆಲೂನ್‌ಗಳಲ್ಲಿ, ಕೋರ್ಟಿನ ಕಾರಿಡಾರ್‌ನಲ್ಲಿ, ವಿಧಾನಸೌಧದ ಕಾರಿಡಾರ್‌ನಲ್ಲಿ ಜನರು ಬಾಯಿಮಾತಿನಲ್ಲಿ ದೂರುತ್ತಾರೆಯೇ ಹೊರತು, ಅದನ್ನು ಸಾಭೀತು ಮಾಡಿ ತೋರಿಸಲು ಯಾರೂ ಸಹ ಸಿದ್ಧರಿರುವುದಿಲ್ಲ. ಇದು ನಮ್ಮ ದೇಶದಲ್ಲಿ ಇನ್ನೂ ಬದಲಾವಣೆ ಆಗಿಲ್ಲ. ಬಾಯಿ ಮಾತಿನಲ್ಲಿ ಟೀಕೆಮಾಡಿದರೆ ಅದುಗಾಳಿಗೆ ಹೋಗುತ್ತದೆ.

SRI K.H. PATIL.—Please take it as a challenge and enquire about that incident.

SRI A. LAKSHMISAGAR.—The Divisional Commissioner has been directed.

SRI K.H. PATIL.—He has been directed and I congratulate you for that. But that Divisional Commissioner's action was illegal, improper and it was realy a currupt practice. Please you take action against him.

ಅಧ್ಯಕ್ಷರು.—ಅವರ ಮೇಲೆ ಕ್ರಮ ಕೈಗೊಳ್ಳಿ ಎಂದು ಹೇಳುತ್ತಿದ್ದೀರಾ ?

ಶ್ರೀ ಎ. ಲಕ್ಷ್ಮೀಸಾಗರ್.—ಅಂತಹವರ ಮೇಲೆ ಕ್ರಮ ಕೈಗೊಳ್ಳುವುದಕ್ಕೆ ಸೆಕ್ಷನ್ ೨(೨)ನಲ್ಲಿ ಅವಕಾಶವಿದೆ. ನಮ್ಮ ಸಮಾಜ ನೊಂದಲಿನಿಂದಲೂ ಯಾವ ರೀತಿ ಬೆಳೆದುಕೊಂಡು ಬಂದಿದೆ ಎಂಬುದನ್ನು ನಾನು ಈ ಹಿಂದಿನ ಅಧಿವೇಶನದ ಸಮಯದಲ್ಲಿ ವಿಧಾನಪರಿಷತ್ತಿನಲ್ಲಿ ಹೇಳಿದ್ದೇನೆ. ನಾನು ಚರಿತ್ರೆಯ ಎಲ್ಲಾ ಪಾಠಗಳನ್ನು ಓದಿದ್ದೇನೆ. ಅದರ ಒಂದು ಆಧಾರದ ಮೇಲೆ ಹೇಳುವುದಾದರೆ ಇಂಥದ್ದು ನಮ್ಮ ದೇಶದಲ್ಲಿ ಈ ಹಿಂದೆಯೂ ಇತ್ತು ಎಂದು ಕಾಣುತ್ತದೆ. ಇಲ್ಲದಿದ್ದರೆ ನಮ್ಮ ದೇಶದಲ್ಲಿ ಇಷ್ಟೊಂದು ಅನ್ಯಾಯಗಳು ನಡೆಯುತ್ತಿರಲಿಲ್ಲ. ಒಂದು ಸಮಾಧಾನದ ಮಾತು ಎಂದರೆ ನಮ್ಮ ರಾಜ್ಯಾಂಗದ ಚೌಕಟ್ಟಿನಲ್ಲಿ ಮತ್ತು ಕಾನೂನಿನ ಚೌಕಟ್ಟಿನಲ್ಲಿ ವಿಚಾರಣೆ ಇಲ್ಲದೆ ಯಾರನ್ನೂ ಸಹ ನಾವು ಶಿಕ್ಷೆಗೆ ಗುರಿಪಡಿಸಲು ಸಾಧ್ಯವಿಲ್ಲ. This is the basic, fundamental principle of criminal jursprudence. Nobody shall be punished without there being an enquiry, however formal or however simple it is There shall be an enquiry before a man is punished. ಈ ಒಂದು ಸೂತ್ರದ ಆಡಿಯಲ್ಲಿ ನಾವು ಕಾನೂನನ್ನು ಮಾಡಬೇಕಾಗುತ್ತದೆ. ನಾವು ನಮ್ಮ ರಾಜ್ಯದಲ್ಲಿ ಈ ಲೋಕಾಯುಕ್ತ ವಿಧೇಯಕವನ್ನು ಬೇರೆ ರಾಜ್ಯಗಳಲ್ಲಿರುವ ಕಾನೂನುಗಳಿಗಿಂತ ಇನ್ನೂ ಹೆಚ್ಚಿನ ವ್ಯಾಪಕವಾದಂಥ ರೀತಿಯಲ್ಲಿ ಮಾಡಿದ್ದೇವೆ. ಈ ಕಾನೂನಿನ ಕಛೇರಿಯಲ್ಲಿ ಕಾಸಕರು ಮಾಗೂ ಮಂತ್ರಿಗಳ ಜೊತೆಗೆ ಮುಖ್ಯಮಂತ್ರಿಗಳು ಸಹ ಬರುತ್ತಾರೆ. ಬೇರೆ ರಾಜ್ಯಗಳಲ್ಲಿ ಮಾಡಿರುವ ಇಂತಹ ಕಾನೂನಿನಲ್ಲಿ ಅಲ್ಲಿನ ಮುಖ್ಯಮಂತ್ರಿಗಳು ಲೋಕಾಯುಕ್ತದ ಕಕ್ಷೆಯಲ್ಲಿ ಬರುವುದಿಲ್ಲ. ಆದ್ದರಿಂದ ಇದು ಬಹಳ ವಿಶೇಷವಾದಂಥ ಕಾನೂನಾಗಿದೆ. ಯಾರು ಬೇಕಾದರೂ ಮುಖ್ಯಮಂತ್ರಿಗಳನ್ನು ಒಳಗೊಂಡಂತೆ ಸಾಮಾನ್ಯ ಸರ್ಕಾರಿ ನೌಕರರವರೆಗೆ ಯಾರ ಮೇಲೆ ಬೇಕಾದರೂ ಆರೋಪ ಮಾಡಬಹುದು. ಆರೋಪ ಮಾಡಿದವರು ಅದನ್ನು ಸಾಭೀತುಗೊಳಿಸಬೇಕು. ಬಾಯಿಮಾತಿನಲ್ಲಿ ಯಾರೂ ಬೇಕಾದರೂ ವಾಚಾಮಗೋಚರವಾಗಿ ದೂರಬಹುದು. ಆದರೆ ಅದನ್ನು ಸಾಭೀತುಗೊಳಿಸುವಂತಹ ಸರಕು ಅವರಲ್ಲಿರಬೇಕು. ದೇವರಮೇಲೆ ಸಹ ದೋಷಾರೋಪಣೆ ಮಾಡುತ್ತಾರೆ ಏಕೆಂದರೆ, ದೇವರು ಕಂಪ್ಲೆಂಟ್ ಮಾಡುವುದಿಲ್ಲ. ಈ ಕೆಲವು ತಿದ್ದುಪಡಿಗಳ ಮೂಲಕ ಸರ್ಕಾರದವರು ತಮ್ಮ ಅಧಿಕಾರವನ್ನು ದುರುಪಯೋಗಪಡಿಸಿಕೊಳ್ಳಬಹುದೆಂದು ಹೇಳಿದರು. ಎಂ.ಎಲ್.ಎ.ಗಳಿಗೆ ಕೆಲವೊಂದು ಅಧಿಕಾರಗಳನ್ನು ಕೊಟ್ಟರೆ, ಅದನ್ನು ಅವರು ಸದುಪಯೋಗ ಪಡಿಸಿಕೊಳ್ಳಬಹುದು ಇಲ್ಲವೇ ದುರುಪಯೋಗಪಡಿಸಿಕೊಳ್ಳಲೂ ಬಹುದು. ಆದ್ದರಿಂದ ಈ ಸಮಾಜದಲ್ಲಿ ನಾವು ಕಾನೂನಿನ ಚೌಕಟ್ಟಿನಲ್ಲಿ ಕೆಲಸ ಮಾಡುವಾಗ ನಾವು ಒಂದು ರಾಜಮಾರ್ಗದಲ್ಲಿ ಹೋಗಬೇಕಾಗುತ್ತದೆ. ಈ ನಮ್ಮ ಸಮಾಜದಲ್ಲಿ ಹಾಗೂ ಸರ್ಕಾದಲ್ಲಿರುವಂತಹ ಅನಾಚಾರಗಳನ್ನು ಹಾಗೂ ಭ್ರಷ್ಟಾಚಾರಗಳನ್ನು ತಡೆಗಟ್ಟುವುದಕ್ಕೆ ಇದು ಒಂದು ಪ್ರಯತ್ನ. ಈ ಒಂದು ಪ್ರಯತ್ನದ ಹಿನ್ನಲೆಯಲ್ಲಿ ಕಂಡುಬಂದಂಥ ಕೆಲವು ನ್ಯೂನತೆಗಳನ್ನು ತಿದ್ದಲು ಈ ಕೆಲವು ತಿದ್ದುಪಡಿಗಳನ್ನು ತಂದಿದ್ದೇವೆ. ಇದನ್ನು ಮೂಲಭೂತವಾಗಿ ಬದಲಾವಣೆ ಮಾಡಬೇಕೆಂದು ಸನ್ಮಾನ್ಯ ಸದಸ್ಯರು ಸಲಹೆ ಮಾಡಿದ್ದಾರೆ, ಮುಂದಿನ ದಿನಗಳಲ್ಲಿ ಅದರ ಒಂದು ಅವಶ್ಯಕತೆ ಕಂಡುಬಂದರೆ ನಾವು ಖಂಡಿತವಾಗಿ ಮಾಡುತ್ತೇವೆ ಮತ್ತು ಈ ಮಾನ್ಯ ಸಭೆಯ ಅನುಮತಿಯನ್ನು ಪಡೆದುಕೊಳ್ಳಲು ನಾವು ಸಿದ್ಧರಾಗಿದ್ದೇವೆ, ಈಗ ನಾವು ತಂದಿರುವ ಈ ತಿದ್ದುಪಡಿಗಳಿಗೆ ಮಾನ್ಯ ಸದಸ್ಯರು ತಮ್ಮ ಅನುಮತಿ ಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು.—ಪ್ರಸ್ತಾಪ ಏನೆಂದರೆ, "೧೯೮೬ನೇ ಕರ್ನಾಟಕ ಲೋಕಾಯುಕ್ತ (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು.....

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ಪರ್ಯಾಲೋಚಿಸುವುದು ಖಂಡ ೨ ರಿಂದ ೧೪ರ ವರೆಗೆ

ಅಧ್ಯಕ್ಷರು.—"ಖಂಡ ೨ರಿಂದ ೧೪ರ ವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ ೨ರಿಂದ ೧೪ರ ವರೆಗೆ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ ೧ ಇತ್ಯಾದಿ.—

ಅಧ್ಯಕ್ಷರು.—ಪ್ರಸ್ತಾಪ ಎನೆಂದರೆ : " ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವವನ್ನು ಅಂಗೀಕರಿಸಲಾಯಿತಂ

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎ. ಲಕ್ಷ್ಮೀಸಾಗರ್.—೧೯೮೬ನೇ ಕರ್ನಾಟಕ ಲೋಕಾಯುಕ್ತ(ಎರಡನೇ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾಪ ಎನೆಂದರೆ : " ೧೯೮೬ನೇ ಕರ್ನಾಟಕ ಲೋಕಾಯುಕ್ತ (ಎರಡನೇ ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು."

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತಂ ಮತ್ತು ವಂಸೂದೆಗೆ ಒಪ್ಪಿಗೆ ನೀಡಲಾಯಿತಂ)

ಕರ್ನಾಟಕ ಪುರಸಭೆಗಳ (ತಿದ್ದುಪಡಿ) ವಿಧೇಯಕ ೧೯೮೬

*Motion to consider*

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಮತ್ತು ಸಂಸದೀಯ ಸಚಿವರು).—ಸನ್ಮಾನ್ಯ ಅಧ್ಯಕ್ಷರೇ ೧೯೮೬ನೇ ಕರ್ನಾಟಕ ಪುರಸಭೆಗಳ (ತಿದ್ದುಪಡಿ) ವಿಧೇಯಕವನ್ನು ಈ ಸಭೆ ಪರ್ಯಾಲೋಚಿಸಬೇಕೆಂದು ನಾನು ಅರಿಕೆ ಮಾಡಿಕೊಳ್ಳುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಗಿದೆ**

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೇ ಈ ವಿಧೇಯಕಕ್ಕೆ ತಿದ್ದುಪಡಿಯನ್ನು ತರುವುದಕ್ಕೆ ಪ್ರಯತ್ನ ಮಾಡಿ ಸುಪಾರು.....

ಶ್ರೀ ಆರ್. ವೆಂಕಟರಾಮಯ್ಯ.—ಸನ್ಮಾನ್ಯ ಅಧ್ಯಕ್ಷರೇ ನನ್ನದೊಂದು ಕ್ರಿಯಾಲೋಪ ಇದೆ. ನನ್ನ ಕ್ರಿಯಾಲೋಪ ಏನೆಂದರೆ It is a financial bill. Article 207 is attracted.

> "94A. Water supply cess:—Where a muncipal council levies tax on buildings or lands under section 94 it shall, in addition, levy a water supply less at the rate of ten percent of such tax for the maintenance and improvement of water supply schemes in urban areas and the cess so collected shall be credited to the Govern ment."

SRI A. LAKSHMISAGAR.—ಮಾನ್ಯ ಅಧ್ಯಕ್ಷರೇ ಇದರಲ್ಲಿ ಇನ್‌ಕಮ್ ಏನೂ ಇಲ್ಲ.....

SRI MALLIKARJUN M. KHARGE.—you are charging 10% cess. In the statement of objects and reasons you are telling that you